# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:25-03-2026 ರಂದು ಬುಧವಾರ "ಶತಮಾನೋತ್ಸವ ಭವನದ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ 401ನೇ "ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.**

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ ಎ.ಎಲ್. ಮಂಜುನಾಥ್, ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ಆರ್. ತಿಮ್ಮರಾಯಪ್ಪ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಡಾ. ಕೇಶವ, ಹೆಚ್. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಪ್ರೊ. ಚಂದ್ರಶೇಖರ್ ಎಸ್., ಡೀನರು, ಕಲಾ ನಿಕಾಯ | ಸದಸ್ಯರು |
| 6. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 7. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 8. | ಡಾ. ಚಿದಾನಂದ ಎನ್.ಕೆ. ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಎಂ. ವೆಂಕಟೇಶ್. ಪ್ರಾಂಶುಪಾಲರು | ಸದಸ್ಯರು |
| 10. | ಡಾ. ಪ್ರಭಾಕರ್ ಎಸ್. ಮಂಟೂರೆ, ಪ್ರಾಂಶುಪಾಲರು | ಸದಸ್ಯರು |
| 11. | ಡಾ. ಪ್ರತಿಭಾ ಕೆ.ಆರ್. ಪ್ರಾಂಶುಪಾಲರು | ಸದಸ್ಯರು |
| 12. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 13. | ಶ್ರೀ ಲಕ್ಷ್ಮಿಕಾಂತ ಚಿಮನೂರು | ಸದಸ್ಯರು |
| 14. | ಪ್ರೊ. ಸಾಕಮ್ಮ ಬಿ. | ಸದಸ್ಯರು |
| 15. | ಶ್ರೀ ಮುಸಾವೀರ್ ಬಾಷಾ ಎಂ. | ಸದಸ್ಯರು |
| 16. | ಶ್ರೀ. ಕೆ.ಪಿ. ಶ್ರೀಪಾಲ್ | ಸದಸ್ಯರು |
| 17. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 2. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:** ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ಪ್ರಕರಣ 28(1)(ಡಿ) ಅನುಸಾರ ಡೀನರ ಜೇಷ್ಠತೆ ಆಧಾರದ ಮೇರೆಗೆ ನೂತನವಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡ ಪ್ರೊ.ಚಂದ್ರಶೇಖರ್ ಎಸ್. ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ ಮತ್ತು ಡೀನರು ಕಲಾ ನಿಕಾಯ ಇವರನ್ನು ಸಭೆಗೆ ಸ್ವಾಗತಿಸಲಾಯಿತು. ಮುಂದುವರೆದು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಪ್ರಕರಣ 28(1)(ಎಫ್) ಅನ್ವಯ ಜೇಷ್ಠತೆಯನುಸಾರ ಸರದಿಯ ಮೇಲೆ ನೂತನವಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡ ಪ್ರಾಂಶುಪಾಲರುಗಳಾದ ಡಾ.ಪ್ರಭಾಕರ್ ಎಸ್. ಮಂಟೂರೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾಳಕೊಪ್ಪ ಹಾಗೂ ಡಾ. ಪ್ರತಿಭಾ ಕೆ.ಆರ್. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆಹೊನ್ನೂರು ಇವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಇದೇ ಸಂದರ್ಭದಲ್ಲಿ ಸಿಂಡಿಕೇಟ್ ಸದಸ್ಯತ್ವ ಅವಧಿ ಮುಗಿದ ಪ್ರೊ. ಆರ್. ಹಿರೇಮಣಿನಾಯ್ಕ, ಡೀನರು, ವಾಣಿಜ್ಯನಿಕಾಯ, ಶ್ರೀ ಉಲ್ಲಾಸ್ ಇ.ಜಿ. ಪ್ರಾಂಶುಪಾಲರು, ಸಹ್ಯಾದ್ರಿ ಇನ್ಸಿಟಿಟ್ಯೂಟ್ ಆಫ್ ಕಾಮರ್ಸ್,

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಚಿಕ್ಕಮಗಳೂರು ಮತ್ತು ಡಾ.ಶೈಲಜಾ ಸಿದ್ದಪ್ಪ ಹೊಸಳ್ಳೇರ, ಪ್ರಾಂಶುಪಾಲರು, ಸರ್.ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿ ಇವರುಗಳು ನೀಡಿದ ಸಲಹೆ ಮತ್ತು ಸಹಕಾರಗಳನ್ನು ಸ್ಮರಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಅವರುಗಳನ್ನು ಎಲ್ಲಾ ಸದಸ್ಯರು ಅಭಿನಂದಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಯವರು, ಮಾನ್ಯ ಕುಲಾಧಿಪತಿಯವರ ಅನುಮೋದನೆಯ ಮೇರೆಗೆ ವಿಶ್ವವಿದ್ಯಾಲಯದ 35 ಮತ್ತು 36ನೇ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ:06-05-2026ರಂದು ಏರ್ಪಡಿಸಲಾಗುವುದು. ಇದಕ್ಕೆ ಅಗತ್ಯ ಸಿದ್ಧತೆಗಳನ್ನು ಈಗಾಗಲೇ ಆರಂಭಿಸಲಾಗಿದೆ. ಎಲ್ಲಾ ಸದಸ್ಯರು ಇದರಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿಕೊಡುವಂತೆ ಕೋರಿದರು. ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದ 2026-27ನೇ ಸಾಲಿನ ಆಯವ್ಯಯದಲ್ಲಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ಪ್ರೊ.ಯು.ಆರ್.ಅನಂತಮೂರ್ತಿ ಅಧ್ಯಯನ ಪೀಠ ಸ್ಥಾಪಿಸುವುದಾಗಿ ಘೋಷಿಸಿರುವುದಕ್ಕೆ ಕುವೆಂಪು ವಿಶ್ವವಿದ್ಯಾಲಯದ ಸಿಂಡಿಕೇಟ್ ಪರವಾಗಿ ಸರ್ಕಾರಕ್ಕೆ ಅಭಿನಂದಿಸುವುದಾಗಿ ತಿಳಿಸಿದರು. ಮುಂದುವರೆದು ಮಾತನಾಡಿದ ಅವರು, 401ನೇ ನೇ ಸಿಂಡಿಕೇಟ್ ಸಭೆಗೆ ಆಗಮಿಸಿದ ನೂತನ ಸದಸ್ಯರನ್ನು ಸ್ವಾಗತಿಸಿ ಅವರಿಗೆ ಶುಭ ಹಾರೈಸಿದರು. ಹಾಗೆಯೇ ಅವಧಿ ಮುಗಿದ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು. ನಮ್ಮ ವಿಶ್ವವಿದ್ಯಾಲಯದ ಹೆಮ್ಮೆಯ ಸಿಂಡಿಕೇಟ್ ಸದಸ್ಯರುಗಳು ಈವರೆಗೂ ಘನತೆ ತಂದುಕೊಡುವ ದೃಷ್ಟಿಯಿಂದ ಸಹಕರಿಸಿದ್ದಾರೆ. ಅದೇ ರೀತಿ ಒಬ್ಬರಿಗೊಬ್ಬರು ಗೌರವ ನೀಡುವುದರ ಮೂಲಕ ಘನತೆ ಉಳಿಸಿಕೊಂಡು ಸಭೆ ನಡೆಸಿ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನಾ ಅಭಿವೃದ್ಧಿಗೆ ಆರೋಗ್ಯಕರ ಚರ್ಚೆ ನಡೆಸಿ ನಿರ್ಣಯ ಕೈಗೊಳ್ಳೋಣ ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಮಹನೀಯರುಗಳಾದ ಶ್ರೀ ಪೂರ್ಣಚಂದ್ರ ತೇಜಸ್ವಿ, ಶ್ರೀ. ಪಿ.ಲಂಕೇಶ್, ಶ್ರೀ ನಿಸಾರ್ ಅಹಮದ್ ಮತ್ತು ಶ್ರೀ ಕೆ.ರಾಮದಾಸ್ ಇವರುಗಳ ಅಧ್ಯಯನ ಪೀಠ ಸ್ಥಾಪಿಸಬೇಕು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ತಿಳಿಸಿದರು. ನಂತರ ಕಾರ್ಯಸೂಚಿಯ ಪ್ರಕಾರ ವಿಷಯವನ್ನು ಚರ್ಚೆಗೆ ಕೈಗೆತ್ತಿಗೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2026-ಸಿಂ-3.01:** ದಿನಾಂಕ:10-10-2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ದಿನಾಂಕ:10-10-2026ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಸಭೆಯ ಅನುಮೋದನೆ ಹಾಗೂ ದೃಢೀಕರಣಕ್ಕಾಗಿ ಕುಲಸಚಿವರು ಮಂಡಿಸಿದರು. ಸದಸ್ಯರಾದ ಶ್ರೀ ಕೆ.ಪಿ. ಶ್ರೀಪಾಲ್‌ರವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕಾರ ಸಿಂಡಿಕೇಟ್ ಸದಸ್ಯರಿಗೆ ಗೌರವ ನೀಡುತ್ತಿಲ್ಲ. ಸದಸ್ಯರ ಮನವಿಗಳಿಗೆ ವಿಶ್ವವಿದ್ಯಾಲಯ ಸ್ಪಂದಿಸುತ್ತಿಲ್ಲ. ಹೊರಗಡೆ ವಿಶ್ವವಿದ್ಯಾಲಯಕ್ಕೆ ಒಳ್ಳೆಯ ಹೆಸರಿದೆ. ಆದರೆ ಒಳಗಡೆ ಯಾವುದೂ ಸರಿಯಿಲ್ಲ. ಸಿಂಡಿಕೇಟ್‌ನಲ್ಲಿ ಆದ ನಿರ್ಣಯಗಳನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಬದಲಾಯಿಸಲಾಗುತ್ತಿದೆ. ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಬಂದಾಗ ಕೆಲವು ಅಧಿಕಾರಿಗಳು ಸರಿಯಾಗಿ ಪ್ರತಿಕ್ರಿಯಿಸುವುದಿಲ್ಲ. ಅತಿಥಿ ಉಪನ್ಯಾಸಕರಿಗೆ 03 ತಿಂಗಳುಗಳಿಂದ ವೇತನ ಪಾವತಿಸಿಲ್ಲ. ಇದನ್ನು ಕೇಳಲು ಬಂದಾಗ ಅವರನ್ನು ಸರಿಯಾಗಿ ನಡೆಸಿಕೊಂಡಿಲ್ಲ ಎಂದರು. ಮುಂದುವರೆದು ಮಾತನಾಡಿದ ಅವರು, 24 ಬೋಧಕ ಹುದ್ದೆಗಳ ನೇಮಕಾತಿಗೆ ಸರ್ಕಾರವು ಅನುಮತಿ ನೀಡಿದ್ದು ರೋಸ್ಟರ್ ಬಿಂದು ಬಗ್ಗೆ ಸರ್ಕಾರದಿಂದ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿತ್ತು. ಸದರಿ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಿದಲ್ಲಿ 24 ಅತಿಥಿ ಉಪನ್ಯಾಸಕರಿಗೆ ಪಾವತಿಸುವ ವೇತನ ವಿಶ್ವವಿದ್ಯಾಲಯಕ್ಕೆ ಉಳಿತಾಯವಾಗುತ್ತದೆ ಎಂದರು. ಕುಲಸಚಿವರು ಮಾತನಾಡಿ ಒಳಮೀಸಲಾತಿ ಕುರಿತಾಗಿ ನ್ಯಾ.ನಾಗಮೋಹನದಾಸ್ ವರದಿ ಹಾಗೂ ಸರ್ಕಾರದ ಆದೇಶಗಳ ಅನ್ವಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ವಿಷಯ ಸಂಖ್ಯೆ:2025–ಸಿಂ–6.24ರ ಕುರಿತಾದ ಶ್ರೀ ಅರವಿಂದ್‌ರವರು ಮಾತನಾಡಿ, ಎಸ್.ಎಂ.ಆರ್. ಕಾಲೇಜಿನ ಪ್ರಾಂಶುಪಾಲರಾಗಿದ್ದ ಡಾ.ಧರ್ಮೇಗೌಡರವರನ್ನು ಅವಧಿಪೂರ್ವವಾಗಿ ಬದಲಾಯಿಸಿ ಡಾ.ಮುತ್ತಯ್ಯರವರನ್ನು ನೇಮಕ ಮಾಡಿದ ಕ್ರಮವನ್ನು ಸದಸ್ಯರು ವಿರೋಧಿಸಿ ನೇಮಕಾತಿ ಆದೇಶ ನೀಡಿರುವುದನ್ನು ಅನುಮೋದಿಸಲು ನಿರಾಕರಿಸಿದ್ದರು. ಆದರೆ, ಮಾನ್ಯ ಕುಲಪತಿಯವರು ತಮ್ಮ ಓವರ್‌ರೈಟಿಂಗ್ ಪವರ್ ಉಪಯೋಗಿಸಿ ಸದರಿ ನೇಮಕವನ್ನು ಸ್ಥಿರೀಕರಿಸಿರುತ್ತಾರೆ. ಇದೇ ರೀತಿ ನಿವೃತ್ತ ಇಂಜಿನಿಯರ್ ಶ್ರೀ ಶಿವಕುಮಾರ್ ಹಂಪಾಳಿರವರ ನೇಮಕವನ್ನು ಕೂಡ ಸದಸ್ಯರು ವಿರೋಧಿಸಿದ್ದಾಗ್ಯೂ ನೇಮಕ ಮಾಡಿಕೊಳ್ಳಲಾಗಿದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಒಂದು ವಿಷಯವನ್ನು ವಿರೋಧಿಸಲು ಆಧಾರ ಇರಬೇಕು. ವಿರೋಧ ಇದ್ದರೆ, ಡಿಸೆಂಟ್ ನೋಟ್ ನೀಡಬೇಕಾಗಿತ್ತು. ಧರ್ಮೇಗೌಡರ ವಿರುದ್ಧ ದೂರುಗಳು ಬಂದಿದ್ದವು. ಅವರನ್ನು 60 ವಯಸ್ಸಿಗೆ ನಿವೃತ್ತಿ ಮಾಡಲಾಗಿತ್ತು. ಆದರೆ, ನ್ಯಾಯಾಲಯದಿಂದ ಆದೇಶ ತಂದು 62ರವರೆಗೆ ಮುಂದುವರೆದಿದ್ದಾರೆ. 60ನೇ ವಯಸ್ಸಿನ ನಂತರ ಅವರು ಪ್ರಿನ್ಸಿಪಾಲ್ ಆಗಿ ಮುಂದುವರೆಯಲು ಇಚ್ಚಿಸಿಲ್ಲ. ಸಹ್ಯಾದ್ರಿ ಕಾಲೇಜಿನ ಬೇರೆ ಹಿರಿಯ ಅಧ್ಯಾಪಕರು ರಂಭಾಪುರಿ ಕಾಲೇಜಿನ ಪ್ರಿನ್ಸಿಪಾಲರಾಗಲು ಒಪ್ಪದಿದ್ದ ಕಾರಣ ಡಾ.ಮುತ್ತಯ್ಯರವರನ್ನು ನೇಮಕ ಮಾಡಲಾಯಿತು ಎಂದರು. ಶ್ರೀ ಬಿ.ಎನ್.ಶಶಿಧರ್‌ರವರು ಮಾತನಾಡಿ, ಸಿಂಡಿಕೇಟ್‌ನಲ್ಲಿ ಬಹುಸಂಖ್ಯಾತ ಸದಸ್ಯರ ಅಭಿಪ್ರಾಯ ಆಧರಿಸಿ ನಿರ್ಣಯ ಆಗಬೇಕು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕಾರ ಸಿಂಡಿಕೇಟ್ ನಿರ್ಣಯಕ್ಕೆ ಕುಲಪತಿಯವರು ವ್ಯತಿರಿಕ್ತವಾದ ಆದೇಶ ಮಾಡಿದಲ್ಲಿ ಅದನ್ನು ಮಾನ್ಯ ಕುಲಾಧಿಪತಿಯವರ ಗಮನಕ್ಕೆ ತರಬೇಕು. ಇದರಲ್ಲಿ ಕುಲಾಧಿಪತಿಯವರ ನಿರ್ಣಯವೇ ಅಂತಿಮವಾಗಿರುತ್ತದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಸಭೆಯು ಸದಸ್ಯ ಕಾರ್ಯದರ್ಶಿಯಾಗಿರುವ ಕುಲಸಚಿವರೇ ಮಾನ್ಯ ಕುಲಾಧಿಪತಿಯವರಿಗೆ ಈ ಕುರಿತಾಗಿ ಪತ್ರ ಬರೆಯಬೇಕಿತ್ತು ಎಂದರು. ಹಾಗಿದ್ದಲ್ಲಿ ಇದನ್ನು ಮಾನ್ಯ ಕುಲಾಧಿಪತಿಯವರ ಗಮನಕ್ಕೆ ತರುವಂತೆ ಸದಸ್ಯರು ಕುಲಸಚಿವರಿಗೆ ಸೂಚಿಸಿದರು. ಕುಲಸಚಿವರು ಮಾತನಾಡಿ, ಸಿಂಡಿಕೇಟ್ ಸದಸ್ಯರು ಮತ್ತು ಮಾನ್ಯ ಕುಲಪತಿಯವರ ನಿರ್ದೇಶನದಂತೆ ಮಾನ್ಯ ಕುಲಾಧಿಪತಿಯವರಿಗೆ ಈ ಕುರಿತು ವರದಿ ಮಾಡುವುದಾಗಿ ತಿಳಿಸಿದರು.

ಸದಸ್ಯರಾದ ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ವಿಷಯ ಸಂಖ್ಯೆ: 2025–ಸಿಂ–6.26(5)ರಲ್ಲಿ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪರಿಸರ ವಿಜ್ಞಾನ ವಿಷಯದ ಅಧ್ಯಾಪಕರಾದ ಡಾ.ಪರಿಸರ ನಾಗರಾಜರವರು ದಿನಾಂಕ:15–07–2025ರಂದು ರಾಷ್ಟ್ರೋತ್ಥಾನ ಬಳಗದ ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಿದ್ದಾರೆ ಸರ್ಕಾರಿ ನೌಕರರು ಧಾರ್ಮಿಕ ಸಂಘ ಸಂಸ್ಥೆಗಳಲ್ಲಿ ಗುರುತಿಸಿಕೊಳ್ಳಲು, ಅವುಗಳನ್ನು ಪ್ರಮೋಟ್ ಮಾಡಲು ಅವಕಾಶವಿಲ್ಲ. ಅವರು ಆರ್.ಎಸ್.ಎಸ್. ಸಿದ್ಧಾಂತವನ್ನು ವಿದ್ಯಾರ್ಥಿಗಳ ಮೇಲೆ ಹೇರುತ್ತಿದ್ದಾರೆ ಎಂದು ಬಹಳಷ್ಟು ದೂರುಗಳಿವೆ. ವಿಶ್ವವಿದ್ಯಾಲಯದ ಅನುಮತಿ ಇಲ್ಲದೆಯೇ ಅವರು ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಲು ಅವಕಾಶವಿಲ್ಲ. ಸಂಘ ಸಂಸ್ಥೆಗಳಲ್ಲಿ ಅವರಿಗೆ ಆಸಕ್ತಿ ಇದ್ದಲ್ಲಿ ಅಧ್ಯಾಪಕ ಹುದ್ದೆಗೆ ರಾಜೀನಾಮೆ ನೀಡಿ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಲಿ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಿ ಅವರನ್ನು ಸೇವೆಯಿಂದ ಅಮಾನತ್ತು ಮಾಡಬೇಕು ಎಂದು ಆಗ್ರಹಿಸಲಾಗಿತ್ತು. ಇದಕ್ಕೆ ಡಾ.ಪರಿಸರ ನಾಗರಾಜ ಅವರ ವಿರುದ್ಧ ದೂರು ಬಂದಿದ್ದು, ಇದಕ್ಕೆ ಅವರಿಂದ ವಿವರಣೆ ಕೇಳಲಾಗಿದೆ. ಅವರು ಉತ್ತರ ನೀಡಿದ್ದಾರೆ. ಇದನ್ನು ಮಾನ್ಯ ಕುಲಪತಿಯವರ ಗಮನಕ್ಕೆ ತರಲಾಗುವುದು ಮತ್ತು ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಕುಲಸಚಿವರು ತಿಳಿಸಿದ್ದರು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಅವರಿಂದ ಈ ಬಗ್ಗೆ ಮಾಹಿತಿ ಪಡೆಯಲಾಗಿದೆ. ಅದು ಅವರು ಕೆಲಸಕ್ಕೆ ಸೇರುವ ಮೊದಲಿನ ಫೋಟೋ ಆಗಿದ್ದು, ಕೆಲಸಕ್ಕೆ ಸೇರಿದ ನಂತರ ಯಾವುದೇ ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಿಲ್ಲ ಎಂದಿದ್ದಾರೆ ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಇದೇ ರೀತಿ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಅಧ್ಯಾಪಕರಾದ ಪ್ರೊ.ಷಣ್ಮುಗ ಅವರು ಪತ್ರಿಕೆಯೊಂದರಲ್ಲಿ ಸರ್ಕಾರದ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅವರು ಪತ್ರಿಕಾ ಹೇಳಿಕೆ ನೀಡಲು ವಿಶ್ವವಿದ್ಯಾಲಯದ ಅನುಮತಿ ಪಡೆದಿದ್ದಾರೆಯೇ? ಇದನ್ನು ಕೂಡ ಗಂಭೀರವಾಗಿ ಪರಿಗಣಿಸಬೇಕು ಎಂದು ನಿರ್ಣಯವಾಗಿತ್ತು. ಇದಕ್ಕೆ ಕೂಡ ಪ್ರೊ.ಷಣ್ಮುಗರವರಿಂದ ಕೂಡ ವಿವರಣೆ ಪಡೆಯಲಾಗುವುದು ಎಂದು ಕುಲಸಚಿವರು ತಿಳಿಸಿದ್ದರು. ಆದರೆ, ಕೈಗೊಂಡ ಕ್ರಮದಲ್ಲಿ ಡಾ. ಎ. ಷಣ್ಮುಗರವರಿಗೆ ಮೆಮೋ ನೀಡುವ ಕುರಿತು ಕಡತವನ್ನು ಮಂಡಿಸಿದ್ದು, ಮಾನ್ಯ ಕುಲಪತಿಗಳು ಸದರಿ ವಿಷಯಕ್ಕೆ ಅನುಮತಿ ನೀಡಲಾಗುವುದಿಲ್ಲ ಎಂದು ಆದೇಶಿಸಿದ್ದಾರೆ ಎಂದು ತಿಳಿಸಿದ್ದಾರೆ. ಅದೇ ರೀತಿ ಡಾ. ಪರಿಸರ ನಾಗರಾಜ ಅವರ ವಿಷಯದಲ್ಲಿ ಹೊರಗಿನವರು ನೀಡಿದ ನಕಲಿ ದೂರನ್ನು ಪರಿಗಣಿಸಿ ಮೆಮೋ ನೀಡುವ ಕ್ರಮವು ಸರಿಯಾದುದಲ್ಲವೆಂದು ತಿಳಿಸಿ ಆದೇಶವನ್ನು ಹಿಂಪಡೆಯಲು ಮಾನ್ಯ ಕುಲಪತಿಯವರು ಆದೇಶಿಸಿದ್ದಾರೆ ಎಂದು ಅನುಪಾಲನಾ ವರದಿ ನೀಡಲಾಗಿದೆ. ಸಭೆಯ ನಿರ್ಣಯಗಳಿಗೆ ಹೀಗೆ ವ್ಯತಿರಿಕ್ತವಾದ ಕ್ರಮವಹಿಸುವುದು ಸರಿಯಲ್ಲ. ಇದರಿಂದ ಸಿಂಡಿಕೇಟ್ ನಿರ್ಣಯಗಳಿಗೆ ಬೆಲೆ ಇಲ್ಲದಂತಾಗುತ್ತದೆ. ನಿರ್ಣಯಗಳಿಗೆ ಬೆಲೆ ಇಲ್ಲವೆಂದಾದರೆ ಅದನ್ನು ಕೈಗೊಂಡ ಸದಸ್ಯರುಗಳಿಗೆ ಕೂಡ ಬೆಲೆ ಇಲ್ಲವಾಗಿದೆ. ಇದು ಸರಿಯಲ್ಲ ಎಂದರು. ಎಲ್ಲಾ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು ಮತ್ತು ಇಂತಹ ಪ್ರಕರಣಗಳನ್ನು ಕುಲಾಧಿಪತಿಯವರ ಅನುಮೋದನಗೆ ಸಲ್ಲಿಸುವಂತೆ ಕುಲಸಚಿವರಿಗೆ ಸೂಚಿಸಿದರು.

ಶ್ರೀ ಶಿವಕುಮಾರ್‌ರವರು ವಿಷಯ ಸಂಖ್ಯೆ:2025–ಸಿಂ–6.27(6)ರಲ್ಲಿ ಅನುದಾನಕ್ಕಾಗಿ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ಸಿಂಡಿಕೇಟ್ ಸದಸ್ಯರ ನಿಯೋಗದೊಂದಿಗೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಯಾಗಬೇಕು. ಉನ್ನತ ಶಿಕ್ಷಣ ಸಚಿವರನ್ನು ವಿಶ್ವವಿದ್ಯಾಲಯಕ್ಕೆ ಕರೆಸಬೇಕು ಅಥವಾ ನಿಯೋಗದೊಂದಿಗೆ ಅವರನ್ನು ಭೇಟಿಯಾಗಬೇಕು. ದೂರಶಿಕ್ಷಣ ಕೋರ್ಸ್‌ಗಳನ್ನು ಮರು ಆರಂಭಿಸುವ ಕುರಿತು ಕೂಡ ಸರ್ಕಾರದೊಂದಿಗೆ ಚರ್ಚಿಸಬೇಕು ಎಂದು ಚರ್ಚಿಸಲಾಗಿತ್ತು. ಆದರೆ ಕೈಗೊಂಡ ಕ್ರಮದಲ್ಲಿ ಇದರ ಬಗ್ಗೆ ಮಾಹಿತಿಯನ್ನೇ ನೀಡಿಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಜನಪ್ರತಿನಿಧಿಗಳು ಮತ್ತು ಸಿಂಡಿಕೇಟ್ ಸದಸ್ಯರನ್ನು ಒಳಗೊಂಡ ನಿಯೋಗ ಹೋಗಿಲ್ಲ, ಹೋಗಲಾಗುವುದು. ದಿನಾಂಕ:21–02–2026ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ನಡೆದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯಲ್ಲಿ ಮಾನ್ಯ ರಾಜ್ಯಪಾಲರು, ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರು ಭಾಗವಹಿಸಿದ್ದರು. ಮಹಿಳಾ ವಿಶ್ವವಿದ್ಯಾಲಯದ ಕುಲಪತಿಯವರು ಸರ್ಕಾರವು ವಿಶ್ವವಿದ್ಯಾಲಯಗಳ ಅನುದಾನ ಕಡಿತಗೊಳಿಸುತ್ತಿದ್ದು, ಆಂತರಿಕ ಸಂಪನ್ಮೂಲ ವೃದ್ಧಿಸಿಕೊಳ್ಳಬೇಕು ಎನ್ನುತ್ತದೆ. ಆದರೆ ಆಂತರಿಕ ಸಂಪನ್ಮೂಲ ಒಂದು ಭಾಗವಾಗಿರುವ ದೂರಶಿಕ್ಷಣ ಕೋರ್ಸ್‌ಗಳನ್ನು ಆರಂಭಿಸಲು ಅನುಮತಿ ನೀಡುತ್ತಿಲ್ಲ ಎಂಬುದನ್ನು ಪ್ರಸ್ತಾಪಿಸಿದ್ದರು. ನಾನು ಕೂಡ ಇದರ ಕುರಿತಾಗಿ ಮಾತನಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಈ ನಿಟ್ಟಿನಲ್ಲಿ ಪ್ರಯತ್ನಿಸೋಣ, ಆಗಬಹುದು ಎಂದರು.

ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ನಮ್ಮಲ್ಲಿ ಸಾಕಷ್ಟು ಖಾಯಂ ಅಧ್ಯಾಪಕರು ಇಲ್ಲದ್ದರಿಂದ ಬೋಧನಾ ಕಾರ್ಯಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಅವರಿಗೆ ಸರಿಯಾಗಿ ವೇತನ ಪಾವತಿ ಮಾಡುತ್ತಿಲ್ಲ. ವೇತನ ಕೇಳಲು ಹೋದರೆ ಹಣಕಾಸು ಅಧಿಕಾರಿಗಳು ದುಡ್ಡಿಲ್ಲ, ಹೋಗಿ ಎಂದು ಉಡಾಫೆಯಿಂದ ಮಾತನಾಡುತ್ತಿದ್ದಾರೆ. ಹೆಚ್ಚಿನ ವಿಭಾಗಗಳು ಅತಿಥಿ ಉಪನ್ಯಾಸಕರ ಮೇಲೆಯೇ ಅವಲಂಬಿತವಾಗಿವೆ. ಅವರಿಗೆ ಸಕಾಲದಲ್ಲಿ ವೇತನ ನೀಡಿ. ಅವರೂ ಕೂಡ ಅಧ್ಯಾಪಕರಾಗಿರುವುದರಿಂದ ಅವರನ್ನು ಗೌರವಯುತವಾಗಿ ನಡೆಸಿಕೊಳ್ಳಿ. ಈ ಬಗ್ಗೆ ಹಣಕಾಸು ಅಧಿಕಾರಿಗಳಿಗೆ ತಿಳುವಳಿಕೆ ನೀಡಿ. ಸರ್ಕಾರದಿಂದ ಹಣಕಾಸು ಅಧಿಕಾರಿಗಳನ್ನು ನಿಯೋಜಿಸಲು ಪತ್ರ ಬರೆಯಿರಿ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಕುಲಸಚಿವರು ಮಾತನಾಡಿ, ಹಣಕಾಸು ಅಧಿಕಾರಿಯನ್ನು ನಿಯೋಜಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಸರ್ಕಾರದಿಂದ ಎರಡು ಬಾರಿ ಹಣಕಾಸು ಅಧಿಕಾರಿಯನ್ನು ನಿಯೋಜಿಸಿ ಆದೇಶ ಮಾಡಿದ್ದರು. ಆದರೆ, ಅವರುಗಳು ಬಂದು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲಿಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಯಾರೇ ಹಣಕಾಸು ಅಧಿಕಾರಿ ಬಂದರೂ ಇಲ್ಲಿನ ಹಣಕಾಸಿನ ಸ್ಥಿತಿ ಉತ್ತಮವಾಗಿಲ್ಲವೆಂದರೆ ಏನೂ ಬದಲಾವಣೆ ಮಾಡಲಾಗದು. ಹಣಕಾಸು ಅಧಿಕಾರಿಯವರು ಆ ರೀತಿ ಮಾತನಾಡಿದ್ದರೆ ಅದು ತಪ್ಪು. ವಿಶ್ವವಿದ್ಯಾಲಯದಲ್ಲಿ ನಿಜವಾಗಿಯೂ ಆರ್ಥಿಕ ತೊಂದರೆ ಇದೆ. ದಿನಾಂಕ:23-03-2026ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಕಡ್ಡಾಯವಾಗಿ ಕಡಿತಗೊಳಿಸಲೇಬೇಕು ಎಂದು ತಿಳಿಸಿದ್ದಾರೆ. ಉನ್ನತ ಶಿಕ್ಷಣ ಸಚಿವರನ್ನು ಭೇಟಿಯಾದಾಗ ದೂರಶಿಕ್ಷಣ ಕೋರ್ಸ್‌ಗಳನ್ನು ಆರಂಭಿಸಲು ಅನುಮತಿ ನೀಡುವಂತೆ ಮನವಿ ಮಾಡಿದ್ದೇವೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ದೂರಶಿಕ್ಷಣ ಕೋರ್ಸ್‌ಗಳ ಕುರಿತಾಗಿ ಸಿಂಡಿಕೇಟ್ ಸದಸ್ಯರನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಲಾಗುವುದು ಎಂದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಎಂ.ಎಲ್.ಸಿ. ಶ್ರೀ ಭೋಜೇಗೌಡರನ್ನು ಭೇಟಿ ಮಾಡಿದ್ದೇವೆ. ವಿಶ್ವವಿದ್ಯಾಲಯದಿಂದ ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಒಂದು ನಿಯೋಗ ತೆರಳಿ ಪ್ರಸ್ತಾವನೆ ಸಲ್ಲಿಸಿ ಮನವರಿಕೆ ಮಾಡಿಕೊಟ್ಟಲ್ಲಿ ಹುದ್ದೆಗಳ ಮಂಜೂರಾತಿ ಮಾಡಿಸಿಕೊಳ್ಳಬಹುದು ಮತ್ತು ಹೆಚ್ಚಿನ ಅನುದಾನ ತರಬಹುದು. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯದಿಂದ ಪ್ರಯತ್ನಗಳು ಆಗುತ್ತಿಲ್ಲ ಎಂದರು.

ಶ್ರೀ ಶಿವಕುಮಾರ್‌ರವರು ಮಾತನಾಡಿ, ಹೊರಗುತ್ತಿಗೆ ಸಿಬ್ಬಂದಿಗಳಲ್ಲಿ ಒಂದೇ ಕುಟುಂಬದ ಹೆಚ್ಚಿನ ಸಂಖ್ಯೆಯ ನೌಕರರು ಇದ್ದಲ್ಲಿ ಹಾಗೂ ಆರ್ಥಿಕವಾಗಿ ಸಬಲವಾಗಿರುವವರು ಇದ್ದಲ್ಲಿ ಅಂತಹ ಪ್ರಕರಣಗಳನ್ನು ಪರಿಶೀಲಿಸಿ ಸಿಬ್ಬಂದಿಗಳ ಸಂಖ್ಯೆ ಕಡಿತಗೊಳಿಸಲು ಪ್ರಯತ್ನಿಸಬಹುದು. ವಿಶ್ವವಿದ್ಯಾಲಯವು ದೇಣಿಗೆ ನೀಡಿ ಎಂದು ಎಲ್ಲಾ ಕಡೆಗಳಲ್ಲಿಯೂ ಕೈಚಾಚುವ ಅಗತ್ಯವಿಲ್ಲ. ಸೋಲಾರ್ ಪವರ್ ರೀತಿಯ ಉಪಯುಕ್ತ ಪ್ರಾಜೆಕ್ಟ್‌ಗಳನ್ನು ತರಬೇಕು. ಅಜೀಂ ಪ್ರೇಂಜಿ ಫೌಂಡೇಶನ್ ರೀತಿಯ ದಾನಿಗಳನ್ನು ಉತ್ತಮ ಪ್ರಸ್ತಾವನೆಗಳೊಂದಿಗೆ ಭೇಟಿಮಾಡಿ, ಮನವೊಲಿಸಿ ಉತ್ತಮ ಪ್ರಾಜೆಕ್ಟ್‌ಗಳನ್ನು ತರಬಹುದು. ಇದರಿಂದ ಆಂತರಿಕ ಸಂಪನ್ಮೂಲದ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ವಿಶ್ವವಿದ್ಯಾಲಯದ ಅಧಿಕಾರಿಗಳು ಸರ್ಕಾರದ ಹಣಕಾಸು ಇಲಾಖೆಗೆ ಭೇಟಿ ನೀಡಿ ಸಲ್ಲಿಸಿದ ಪ್ರಸ್ತಾವನೆಗೆ ಪಿಂಚಣಿ ಅನುದಾನ ರೂ.15.00ಕೋಟಿಗಳನ್ನು ಬಿಡುಗಡೆ ಮಾಡಿದ್ದಾರೆ. ಅಭಿವೃದ್ಧಿ ಅನುದಾನ ರೂ.5.00 ಕೋಟಿ ನೀಡುವುದಾಗಿ ತಿಳಿಸಿದ್ದಾರೆ ಎಂದರು.

ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅಂಕಗಳ ವ್ಯತ್ಯಾಸ 20 ರಿಂದ 80 ಆಗಿದ್ದ ಬಗ್ಗೆ ತನಿಖೆ ಮಾಡುವಂತೆ ತಿಳಿಸಲಾಗಿತ್ತು. ಆದರೆ ಯಾವುದೇ ಕ್ರಮ ಆಗಿಲ್ಲ ಎಂದರು.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದೆ. ಎಲ್ಲಾ ಫಲಿತಾಂಶ ಪ್ರಕಟವಾದ ನಂತರ ಈ ಬಗ್ಗೆ ತನಿಖೆ ನಡೆಸಲಾಗುವುದು ಎಂದರು.

**ನಿರ್ಣಯ:** ಚರ್ಚೆಯ ನಂತರ, ದಿನಾಂಕ:10-10-2026ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಅನುಮೋದಿಸಿ ದೃಢೀಕರಿಸಿದ ಸಭೆಯು ಸದಸ್ಯರು ವ್ಯಕ್ತಪಡಿಸಿರುವ ಅಭಿಪ್ರಾಯಗಳಿಗೆ ಮತ್ತು ಅಧಿಕಾರಿಗಳು ನೀಡಿರುವ ಮಾಹಿತಿಗಳಂತೆ ಕ್ರಮ ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

**2026-ಸಿಂ-3.02:** ದಿನಾಂಕ:10-10-2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

**ನಿರ್ಣಯ:** ಚರ್ಚೆಯ ನಂತರ ದಿನಾಂಕ:10-10-2025 ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಅನುಮೋದಿಸಿ ದೃಢೀಕರಿಸಿದ ಸಭೆಯು ಕ್ರಮ ಸಂಖ್ಯೆ: 2026-ಸಿಂ-3.01ರಲ್ಲಿನ ನಿರ್ಣಯದಂತೆ ಕ್ರಮವಹಿಸಬೇಕೆಂದು ನಿರ್ಣಯಿಸಿತು.

**2026-ಸಿಂ-3.03:** ದಿನಾಂಕ:18-02-2026 ರಂದು ನಡೆದ ವಿಶೇಷ ಸಿಂಡಿಕೇಟ್ (ಆನ್‌ಲೈನ್) ಸಭೆಯ ನಡಾವಳಿಗಳ ದೃಢೀಕರಣ.

**ಚರ್ಚೆ:** ದಿನಾಂಕ:18-02-2026ರಂದು ನಡೆದ ವಿಶೇಷ ಸಿಂಡಿಕೇಟ್ (ಆನ್‌ಲೈನ್) ಸಭೆಯ ನಡಾವಳಿಗಳನ್ನು ದೃಢೀಕರಣಕ್ಕಾಗಿ ಸಭೆಗೆ ಮಂಡಿಸಲಾಯಿತು. ಶ್ರೀ ಅರವಿಂದ್‌ರವರು ಮಾತನಾಡಿ 03 ಬಿ.ಇಡಿ. ಕಾಲೇಜುಗಳಿಗೆ ಭೇಟಿ ನೀಡಲು ಸಿಂಡಿಕೇಟ್ ಸದಸ್ಯರನ್ನು ಒಳಗೊಂಡ ಸಮಿತಿ ರಚಿಸಲಾಗುವುದು ಎಂದು ಸಭೆಯಲ್ಲಿ ನಿರ್ಣಯವಾಗಿತ್ತು. ಆದರೆ, ಈವರೆಗೆ ಸಮಿತಿ ಆಗಿಲ್ಲ, ಭೇಟಿ ನೀಡಿಲ್ಲ. ಆದರೆ ಎಲ್ಲಾ ಕಾಲೇಜುಗಳಂತೆಯೇ ಈ ಮೂರೂ ಕಾಲೇಜುಗಳ ವಿಷಯದಲ್ಲಿ ಕೂಡ ಸಂಯೋಜನೆ ಬಗ್ಗೆ ಕ್ರಮ ಆಗಿದೆ ಎಂದರು. ಶ್ರೀ. ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ತೀರ್ಥಹಳ್ಳಿಯಲ್ಲಿರುವ ಬಿ.ಎಡ್. ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲ. ಈ ಬಗ್ಗೆ ಭೇಟಿ ನೀಡಿ ಸಮಗ್ರವಾಗಿ ಪರಿಶೀಲಿಸುವುದು ಒಳ್ಳೆಯದು. ಅದೇ ರೀತಿ ಪಾರ್ಶ್ವನಾಥ ಕಾಲೇಜನ್ನು ಚನ್ನಗಿರಿಯಿಂದ ವರ್ಗಾಯಿಸಿ ಶಿವಮೊಗ್ಗದ ವಾಸವಿ ಶಾಲೆಯ ಕಟ್ಟಡವನ್ನು ಲೀಸ್ ಪಡೆದುಕೊಂಡು ಕಾಲೇಜು ನಡೆಸುತ್ತಿರುವುದಾಗಿ ತಿಳಿಸುತ್ತಿದ್ದಾರೆ. ವಾಸವಿ ಶಾಲೆ ಹಳೆಯ ಕಟ್ಟಡವಾಗಿರುವುದರಿಂದ ಸುರಕ್ಷತೆಯ ಬಗ್ಗೆ ಇನ್ನೊಮ್ಮೆ ಪರಿಶೀಲಿಸುವುದು ಒಳಿತು ಎಂದರು.

ಶ್ರೀ ಶಿವಕುಮಾರ್‌ರವರು ಮಾತನಾಡಿ, ಕಾಲೇಜುಗಳಲ್ಲಿ ಸಮಸ್ಯೆ ಇದ್ದಲ್ಲಿ ಅವರಿಗೆ ಸರಿಪಡಿಸಿಕೊಳ್ಳುವಂತೆ ಸೂಕ್ತ ಎಚ್ಚರಿಕೆ ನೀಡಬೇಕು. ಇತ್ತೀಚಿನ ದಿನಗಳಲ್ಲಿ ಇರುವ ಕಾಲೇಜುಗಳನ್ನು ಉಳಿಸಿಕೊಳ್ಳುವುದು ಕೂಡ ಅಗತ್ಯವಾಗಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ಕೆ.ಪಿ.ಶ್ರೀಪಾಲ್‌ರವರು ಕಾಲೇಜುಗಳ ಗುಣಮಟ್ಟವನ್ನು ಕೂಡ ಪರಿಶೀಲಿಸುವುದು ಅಗತ್ಯ. ಪರಿಶೀಲಿಸಿ ಎಚ್ಚರಿಕೆ ನೀಡಬೇಕು. ಇಲ್ಲವಾದಲ್ಲಿ ಉನ್ನತ ಶಿಕ್ಷಣದ ಗುಣಮಟ್ಟಕ್ಕೆ ಧಕ್ಕೆ ಬರುತ್ತದೆ. ಸಿಂಡಿಕೇಟ್ ನಿರ್ಣಯಕ್ಕೆ ಬೆಲೆ ನೀಡುವುದರ ಮೂಲಕ ಕಾಲೇಜುಗಳಿಗೆ ಭೇಟಿ ನೀಡಲು ಸಮಿತಿ ರಚಿಸಿ ಒಂದು ದಿನಾಂಕ ನಿಗದಿಪಡಿಸಿ ಎಂದರು. ಮುಂದುವರೆದು ಮಾತನಾಡಿದ ಅವರು ಕೇವಲ 2-3 ಕಾಲೇಜುಗಳಿಗೆ ಮಾತ್ರ ಭೇಟಿ ನೀಡುವುದು ಸರಿಯಲ್ಲ. ಬಹಳಷ್ಟು ಕಾಲೇಜುಗಳಲ್ಲಿ ಸಮಸ್ಯೆ ಇದ್ದು, ಅಂತಹ ಕಾಲೇಜುಗಳಿಗೆ ಕೂಡ ಭೇಟಿ ನೀಡಬೇಕಾಗುತ್ತದೆ ಎಂದರು..

ಕುಲಸಚಿವರು ಮಾತನಾಡಿ, ಸಿಂಡಿಕೇಟ್ ನಿರ್ಣಯದಂತೆ ಮಾನ್ಯ ಕುಲಪತಿಯವರಿಗೆ ಕಡತ ಮಂಡಿಸಲಾಗಿತ್ತು. ಅವರು ತುರ್ತಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಿರುವುದರಿಂದ, ಈಗ ಅನುಮೋದನೆ ನೀಡಿ ನಂತರ ಸಮಿತಿ ಭೇಟಿ ನೀಡಲಿ ಎಂದಿದ್ದಾರೆ. ಸಮಿತಿ ರಚಿಸಲು ಮತ್ತೊಮ್ಮೆ ಮಾನ್ಯ ಕುಲಪತಿಯವರಿಗೆ ಕಡತ ಮಂಡಿಸಲಾಗಿದೆ ಎಂದರು.

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಈ 03 ಬಿ.ಇಡಿ. ಕಾಲೇಜುಗಳ ಜೊತೆಗೆ ತರೀಕೆರೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿರುವ ಒಂದು ಬಿ.ಇಡಿ. ಕಾಲೇಜನ್ನು ಕೂಡ ಪರಿಶೀಲಿಸಿ. ಸಮಿತಿ ಭೇಟಿ ನೀಡುವಾಗ ಕಾಲೇಜುಗಳಲ್ಲಿ ಎಲ್ಲವೂ ಸರಿ ಇರುತ್ತದೆ. ಆದುದರಿಂದ ಕಾಲೇಜುಗಳಿಗೆ ಮುಂಚಿತವಾಗಿ ಮಾಹಿತಿ ನೀಡದೇ ಭೇಟಿ ನೀಡುವುದು ಒಳಿತು ಎಂದರು. ಶ್ರೀಮತಿ ಸಾಕಮ್ಮರವರು ಮಾತನಾಡಿ, ಸದರಿ 03 ಬಿ.ಇಡಿ. ಕಾಲೇಜುಗಳಿಗೆ ಪರಿಶೀಲನಾ ಸಮಿತಿ ಕಳುಹಿಸಬೇಕು. ಸಮಿತಿಯು ಕಾಲೇಜಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ವರದಿ ನೀಡಬೇಕೇ ಹೊರತು ಸಂಯೋಜನೆಯನ್ನು ರದ್ದುಪಡಿಸಲು ಅವಕಾಶವಿಲ್ಲ. ಇರುವ ಸಮಸ್ಯೆಗಳಲ್ಲಿ ಸರಿಪಡಿಸಿಕೊಳ್ಳಿ ಎಂದು ಸಲಹೆ ನೀಡಬಹುದು ಅಷ್ಟೇ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ನಿರ್ಣಯ: ಸುದೀರ್ಘ ಚರ್ಚೆಯ ನಂತರ, ದಿನಾಂಕ:18-02-2026ರಂದು ನಡೆದ ವಿಶೇಷ ಸಿಂಡಿಕೇಟ್ (ಆನ್‌ಲೈನ್) ಸಭೆಯ ನಡಾವಳಿಗಳನ್ನು ದೃಢೀಕರಿಸಿದ ಸಭೆಯು, 03 ಬಿ.ಇಡಿ. ಕಾಲೇಜುಗಳಲ್ಲಿನ ನೈಜತೆಯನ್ನು ಪರಿಶೀಲಿಸುವ ಸಲುವಾಗಿ ಸಿಂಡಿಕೇಟ್ ಸದಸ್ಯರು, ವಿಷಯ ತಜ್ಞರು ಮತ್ತು ತಾಂತ್ರಿಕ ತಜ್ಞರನ್ನು ಒಳಗೊಂಡ ಸಮಿತಿ ರಚಿಸಿ ಕಾಲೇಜುಗಳಿಗೆ ಭೇಟಿ ನೀಡಿ ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ವರದಿ ನೀಡಬೇಕೆಂದು ನಿರ್ಣಯಿಸಲಾಯಿತು.

**2026-ಸಿಂ-3.04:** ದಿನಾಂಕ:18-02-2026 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

ನಿರ್ಣಯ: ವಿಷಯ ಸಂಖ್ಯೆ:2026-ಸಿಂ-3.03ರಲ್ಲಿನ ಚರ್ಚೆ ಮತ್ತು ನಿರ್ಣಯವನ್ನು ಅನುಷ್ಠಾನಗೊಳಿಸುವಂತೆ ನಿರ್ಣಯಿಸಿದ ಸಭೆಯು ದಿನಾಂಕ:18-02-2026 ರಂದು ನಡೆದ ವಿಶೇಷ ಸಿಂಡಿಕೇಟ್ (ಆನ್‌ಲೈನ್) ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಅನುಮೋದಿಸಿತು.

**2026-ಸಿಂ-3.05:** ಸ್ನಾತಕೋತ್ತರ (ಎಂ.ಪಿ.ಇಡಿ) ದೈಹಿಕ ಶಿಕ್ಷಣ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ದೈಹಿಕ ಶಿಕ್ಷಣ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026-ಸಿಂ-3.06:** ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026-ಸಿಂ-3.07:** ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026-ಸಿಂ-3.08:** ಸ್ನಾತಕೋತ್ತರ ಔಷಧೀಯ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಔಷದೀಯ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
...ಮೊಗ್ಗ ಜಿಲ್ಲೆ.

**2026–ಸಿಂ–3.09:** ಸ್ನಾತಕೋತ್ತರ ಎಂ.ಸಿ.ಎ ಮತ್ತು ಗಣಕ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಎಂ.ಸಿ.ಎ. ಮತ್ತು ಗಣಕವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–3.10:** ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–3.11:** ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–3.12:** ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–3.13:** ಸ್ನಾತಕ (ಬಿ.ಎ–ದೈಹಿಕ ಶಿಕ್ಷಣ) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ (ಬಿಎ–ದೈಹಿಕ ಶಿಕ್ಷಣ) ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–3.14:** ಸ್ನಾತಕ ಗಣಿತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ ಗಣಿತಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

**2026–ಸಿಂ–3.15:** ಸ್ನಾತಕ ಸಮಾಜಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ ಸಮಾಜಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–3.16:** ಸ್ನಾತಕ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ–2000, ಪ್ರಕರಣ 33(1) ಮತ್ತು (2) ರನ್ವಯ ಸ್ನಾತಕ ರಾಜ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಸಲ್ಲಿಸಲಾಗಿದ್ದ ತಜ್ಞರ ಪಟ್ಟಿಯನ್ನು ಅನುಮೋದಿಸಿದ ಸಭೆಯು, ಸದಸ್ಯರುಗಳ ಸಲಹೆಯ ಪ್ರಕಾರ ಅಧ್ಯಯನ ಮಂಡಳಿಯನ್ನು ರಚಿಸಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಿತು.

**2026–ಸಿಂ–3.17:** ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮಂಡಳಿಯ ಪುನರ್‌ರಚನೆ ಕುರಿತು ಸ್ಥಿರೀಕರಣಕ್ಕಾಗಿ ಮಂಡಿಸುವ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ, ಡಾ. ಮುದುಕಪ್ಪ, ಸಹಾಯಕ ಪ್ರಾಧ್ಯಾಪಕರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಇವರ ವಿರುದ್ಧ ಆರೋಪ ಬಂದಿರುವ ಹಿನ್ನೆಲೆಯಲ್ಲಿ, ಅವರನ್ನು ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮಂಡಳಿಯ ಸದಸ್ಯರಾಗಿ ನೇಮಕ ಮಾಡಿರುವುದನ್ನು ಅನುಮೋದಿಸಲು ನಿರಾಕರಿಸಿದ ಸಭೆಯು, ಅವರನ್ನು ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಿರುವ ಹಿನ್ನೆಲೆಯಲ್ಲಿ, ಸದರಿಯವರ ಹೆಸರನ್ನು ಕೈಬಿಟ್ಟು ಪರಿಷ್ಕೃತ ಅಧಿಸೂಚನೆ ಹೊರಡಿಸುವಂತೆ ನಿರ್ಣಯಿಸಿತು.

**2026–ಸಿಂ–3.17(ಎ):** ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಗಳಿಗೆ ಆಗಮಿಸುವ ಆಂತರಿಕ ಮತ್ತು ಬಾಹ್ಯ ಸದಸ್ಯರುಗಳಿಗೆ ಪಾವತಿಸುತ್ತಿರುವ ದಿನಭತ್ಯೆ/ಉಪಸ್ಥಿತ ಭತ್ಯೆ/ಕಾರು ದರ ಮತ್ತು ಅತಿಥ್ಯ ಭತ್ಯೆಯನ್ನು ಪರಿಷ್ಕರಿಸಿ ದರಗಳನ್ನು ನಿಗಿದಿಪಡಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿ ಸಭೆಗಳಿಗೆ ಆಗಮಿಸುವ ಆಂತರಿಕ ಮತ್ತು ಬಾಹ್ಯ ಸದಸ್ಯರುಗಳಿಗೆ ಪಾವತಿಸುತ್ತಿರುವ ದಿನಭತ್ಯೆ/ಉಪಸ್ಥಿತಿ ಭತ್ಯೆ/ಕಾರು ದರ ಮತ್ತು ಆತಿಥ್ಯ ಭತ್ಯೆಯನ್ನು ಈ ಕೆಳಗಿನಂತೆ ಪರಿಷರಿಷ್ಕರಿಸಿ ದರಗಳನ್ನು ನಿಗದಿಪಡಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

| ಕ್ರ ಸಂ. | ವಿವರ | ಪ್ರಸ್ತುತ ಪಾವತಿಸುತ್ತಿರುವ ಭತ್ಯೆಯ ದರಗಳು | ಪರಿಷ್ಕರಿಸಿ ನಿಗದಿಪಡಿಸಿದ ಭತ್ಯೆಯ ದರಗಳು |
|---|---|---|---|
| 01 | ಅಧ್ಯಯನ ಮಂಡಳಿ ಆಂತರಿಕ ಸದಸ್ಯರು | ರೂ.500/– | ಉಪಸ್ಥಿತಿ ಭತ್ಯೆ (ಪ್ರತಿ ಸಭೆಗೆ) ರೂ.500/– |
| 02 | ಅಧ್ಯಯನ ಮಂಡಳಿಯ ಬಾಹ್ಯ ಸದಸ್ಯರು | ರೂ.500/– | ದಿನ ಭತ್ಯೆ (ಪ್ರತಿ ಸಭೆಗೆ) ರೂ.500/– |
| 03 | ಬಾಹ್ಯ ಸದಸ್ಯರ ಕಾರು ಪ್ರಯಾಣ ದರ | ಪ್ರತಿ ಕಿ.ಮೀ.ಗೆ ರೂ.3/– | ಪ್ರತಿ ಕಿ.ಮೀ.ಗೆ ರೂ.6/– |
| 04 | ಅಧ್ಯಯನ ಮಂಡಳಿಯ ಸದಸ್ಯರ ಆತಿಥ್ಯ ವೆಚ್ಚ | ಪಾವತಿಸುತ್ತಿಲ್ಲ | ಪ್ರತಿ ಸದಸ್ಯರಿಗೆ ತಲಾ ರೂ.50/– |

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
...577 451

**2026–ಸಿಂ–3.18:** 2026–27ನೇ ಆರ್ಥಿಕ ವರ್ಷದ ಆಯ–ವ್ಯಯ ಅಂದಾಜು ಪರಿಶೀಲನೆ ಮತ್ತು ಅನುಮೋದನೆಗಾಗಿ.

**ಚರ್ಚೆ:** ಸಭೆಗೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಹಣಕಾಸು ಅಧಿಕಾರಿಗಳಾದ ಪ್ರೊ.ಹೆಚ್.ಎಸ್. ರಮೇಶ್‌ರವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 2000. ಪ್ರಕರಣ 48(1) ಮತ್ತು 32(ii)ರ ಅನ್ವಯ ದಿನಾಂಕ:23–03–2026ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆಯಾಗಿರುವ ವಿಶ್ವವಿದ್ಯಾಲಯದ 2026–27ನೇ ಆರ್ಥಿಕ ವರ್ಷದ ರೂ.5313.60ಲಕ್ಷಗಳ ಕೊರತೆಯ ಆಯ–ವ್ಯಯ ಅಂದಾಜನ್ನು ಸಭೆಯ ಅವಲೋಕನ ಮತ್ತು ಅನುಮೋದನೆಗಾಗಿ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಸಂಶೋಧನಾ ಚಟುವಟಿಕೆಗಳನ್ನು ನ್ಯಾಕ್ ಮಾನ್ಯತೆಯನ್ನು ಗಮನದಲ್ಲಿಟ್ಟುಕೊಂಡು ಯಥಾವತ್ತಾಗಿ ಮುಂದುವರಿಸಬೇಕಾಗಿದೆ. ಆಯವ್ಯಯದಲ್ಲಿನ ಕೊರತೆಯನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದಿಂದ ಹೆಚ್ಚುವರಿ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸುವುದು, ಆಡಳಿತಾತ್ಮಕ ವೆಚ್ಚಗಳಲ್ಲಿ ಕಡಿತಗೊಳಿಸುವುದು, ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ಭರ್ತಿಗೆ ಪ್ರಯತ್ನ, ಕಾರ್ಯಭಾರಕ್ಕೆ ಅನುಗುಣವಾಗಿ ಹೆಚ್ಚುವರಿಯಾಗಿರುವ ಹೊರಗುತ್ತಿಗೆ ನೌಕರರು ಹಾಗೂ ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಕಡಿತಗೊಳಿಸಬೇಕಾಗಿದೆ ಮತ್ತು ಬಾಕಿ ಇರುವ ಪರಿನಿಯಮಗಳಿಗೆ ಆದ್ಯತೆಯ ಮೇರೆಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗಿದೆ. 2025–26ನೇ ಸಾಲಿನಲ್ಲಿ ಪಿಂಚಣಿಗಾಗಿ ಸರ್ಕಾರವು ರೂ.2500ಲಕ್ಷಗಳನ್ನು ನೀಡಿದ್ದು, ಹಿಂದಿನ ವರ್ಷದ ರೂ.1050.25 ಲಕ್ಷಗಳ ಪಿಂಚಣಿ ಪಾವತಿ ಬಾಕಿ ಇದೆ. 2026–27 ಸಾಲಿನಲ್ಲಿ ರೂ.5935.61 ಲಕ್ಷಗಳನ್ನು ಪಿಂಚಣಿಗೆ ಅಂದಾಜಿಸಲಾಗಿದ್ದು, ಸರ್ಕಾರವು ಕೇವಲ ರೂ.2000 ಲಕ್ಷಗಳನ್ನು ಮಾತ್ರ ನೀಡಿದೆ. ಆದಾಗ್ಯೂ ಕೂಡ ರೂ.3935.61ಲಕ್ಷಗಳ ಕೊರತೆ ಇದೆ ಎಂಬ ವಿವರಗಳನ್ನು ನೀಡಿದರು.

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಪ್ರವೇಶ ಪ್ರಕ್ರಿಯೆ ತಡವಾಗುವುದರಿಂದ, ವಿದ್ಯಾರ್ಥಿಗಳು ಬೇರೆಡೆಗಳಲ್ಲಿ ಪ್ರವೇಶ ಪಡೆಯುವುದರಿಂದ ಇಲ್ಲಿನ ಪ್ರವೇಶ ಸಂಖ್ಯೆ ಕಡಿಮೆಯಾಗುತ್ತದೆ. ಆದುದರಿಂದ, ಫಲಿತಾಂಶ ಬರುವುದು ತಡವಾದಲ್ಲಿ ತಾತ್ಕಾಲಿಕ ಪ್ರವೇಶ ಮಾಡಿಕೊಳ್ಳಬೇಕು. ಇದರಿಂದ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಪ್ರವೇಶ ಪಡೆಯಲಿದ್ದು, ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಆಂತರಿಕ ಸಂಪನ್ಮೂಲ ಎರಡೂ ಹೆಚ್ಚಳವಾಗುತ್ತದೆ ಎಂದರು. ಮುಂದುವರೆದು ಮಾತನಾಡಿದ ಅವರು ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೆ ಪ್ರವೇಶದ ಅರ್ಹತೆಯನ್ನು ಸರ್ಕಾರವು 10ನೇ ತರಗತಿ ಬದಲಾಗಿ ಪಿಯುಸಿ ಉತ್ತೀರ್ಣವನ್ನು ನಿಗದಿಪಡಿಸಿದೆ. ಈ ಹಿನ್ನೆಲೆಯಲ್ಲಿ ಸಹ್ಯಾದ್ರಿ ಕಾಲೇಜು, ಸ್ನಾತಕೋತ್ತರ ಕೇಂದ್ರ ಕಡೂರುಗಳಲ್ಲಿ ಲಭ್ಯ ಸೌಲಭ್ಯಗಳನ್ನು ಬಳಸಿಕೊಂಡು ಪ್ಯಾರಾಮೆಡಿಕಲ್ ಕೋರ್ಸ್‌ಗಳನ್ನು ಆರಂಭಿಸಬಹುದು. ಮೈಸೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾಲಯಗಳಲ್ಲಿರುವಂತೆ ಎಲ್.ಎಲ್.ಬಿ.ಯನ್ನು ಕೂಡ ತೆರೆಯಬಹುದು ಎಂದರು. ಶ್ರೀ ಶಿವಕುಮಾರ್ ಮತ್ತು ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ಎಲ್.ಎಲ್.ಬಿ. ಕೋರ್ಸ್‌ಗೆ ಹೆಚ್ಚಿನ ಬೇಡಿಕೆ ಇದ್ದು, ಈಗಿರುವ ಕಾನೂನು ಕಾಲೇಜುಗಳಲ್ಲಿ ಪ್ರವೇಶ ಸಿಗುತ್ತಿಲ್ಲ. ಪದವಿ ಪೂರೈಸಿದ ವಿದ್ಯಾರ್ಥಿಗಳು ಸ್ನಾತಕೋತ್ತರ ಕೋರ್ಸ್‌ಗಳ ಬದಲಾಗಿ ವೃತ್ತಿಶಿಕ್ಷಣ ಕೋರ್ಸ್ ಆಗಿರುವ ಕಾನೂನು ಪದವಿಯನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಇತ್ತೀಚಿಗೆ ಹೆಚ್ಚಿನ ಬೇಡಿಕೆ ಇರುವ ಎ.ಐ. ಕೋರ್ಸ್‌ನ್ನು ಕೂಡ ಆರಂಭಿಸಬಹುದು. ಹೊಸ ಕೋರ್ಸ್‌ಗಳು, ಕ್ರೀಡಾ ಸೌಲಭ್ಯಗಳು ಮುಂತಾದವುಗಳಿಗೆ ದಾನಿಗಳ ನೆರವು ಪಡೆಯಬಹುದು. ಯಾವ ಹೊಸ ಕೋರ್ಸ್‌ಗಳನ್ನು ಆರಂಭಿಸಬಹುದು, ಅವುಗಳ ರೂಪು–ರೇಷೆ ಹೇಗಿರಬೇಕು, ಯಾವ್ಯಾವ ಕೋರ್ಸ್‌ಗಳನ್ನು ಎಲ್ಲೆಲ್ಲಿ ಆರಂಭಿಸಬಹುದು ಮತ್ತು ಅವುಗಳ ಸಾಧಕ ಬಾಧಕಗಳ ಕುರಿತು ಚರ್ಚಿಸಲು ಒಂದು ಸಮಿತಿಯನ್ನು ರಚಿಸಲಾಗುವುದು. ಹಾಗೆಯೇ ದೂರ ಶಿಕ್ಷಣ ಕೋರ್ಸ್‌ಗಳನ್ನು ಪುನರಾರಂಭಿಸುವ ಕುರಿತು ಸಿಂಡಿಕೇಟ್ ಸದಸ್ಯರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ಕೂಡ ರಚಿಸಲಾಗುವುದು ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ನಿರ್ಣಯ: ಸುದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದ 2026–27ನೇ ಆರ್ಥಿಕ ವರ್ಷದ ಆಯ–ವ್ಯಯ ಅಂದಾಜನ್ನು ಅನುಮೋದಿಸಿದ ಸಭೆಯು, ವಿದ್ಯಾರ್ಥಿಗಳಿಗೆ ನಾವೀನ್ಯತೆಯ ಮತ್ತು ವೃತಿಪರ ಶಿಕ್ಷಣ ನೀಡುವ ಸಲುವಾಗಿ ಹಾಗೂ ಆಂತರಿಕ ಆದಾಯ ವೃದ್ದಿಯ ಹಿನ್ನೆಲೆಯಲ್ಲಿ ಹೊಸ ಕೋರ್ಸ್‌ಗಳನ್ನು ಆರಂಭಿಸುವ ಕುರಿತು ಯಾವ ಹೊಸ ಕೋರ್ಸ್‌ಗಳನ್ನು ಆರಂಭಿಸಬಹುದು, ಅವುಗಳ ರೂಪು–ರೇಷೆ ಹೇಗಿರಬೇಕು, ಯಾವ್ಯಾವ ಕೋರ್ಸ್‌ಗಳನ್ನು ಎಲ್ಲೆಲ್ಲಿ ಆರಂಭಿಸಬಹುದು ಮತ್ತು ಅವುಗಳ ಸಾಧಕ ಬಾಧಕಗಳ ಕುರಿತು ಚರ್ಚಿಸಿ ವರದಿ ನೀಡುವ ಸಲುವಾಗಿ ಡಾ.ಕಂಠೀಕರ್, ಡಾ.ಪವಿತ್ರಾ, ಶ್ರೀ ಹರಿಪ್ರಸಾದ್, ಬೆಂಗಳೂರು, ಎಲ್ಲಾ ಸಿಂಡಿಕೇಟ್ ಸದಸ್ಯರು, ಒಂದೆರಡು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು, ಜನಪ್ರತಿನಿಧಿಗಳಾದ, ಭದ್ರಾವತಿಯ ಮಾನ್ಯ ಶಾಸಕರಾದ ಶ್ರೀ ಬಿ.ಕೆ. ಸಂಗಮೇಶ್ವರ, ತರೀಕೆರೆಯ ಮಾನ್ಯ ಶಾಸಕರಾದ ಶ್ರೀ ಶ್ರೀನಿವಾಸ್, ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಭೋಜೇಗೌಡ ಮತ್ತು ಡಾ.ಧನಂಜಯ ಸರ್ಜಿ ಇವರುಗಳನ್ನೊಳಗೊಂಡ ಸಮಿತಿಯೊಂದನ್ನು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ರಚಿಸಲು ನಿರ್ಣಯಿಸಲಾಯಿತು.

**2026–ಸಿಂ–3.19:** 2024–25ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳನ್ನು ಪರಿಶೀಲನೆ ಮತ್ತು ಅನುಮೋದನೆ ಕುರಿತು.

ನಿರ್ಣಯ: ಈ ಬಗ್ಗೆ ಹೆಚ್ಚಿನ ಚರ್ಚೆ ಹಾಗೂ ಮಾಹಿತಿಯ ಅವಶ್ಯಕತೆ ಇದ್ದುದರಿಂದ ಇದನ್ನು ಸಿಂಡಿಕೇಟ್ ಸಭೆಯನ್ನು ಆನ್‌ಲೈನ್‌ನಲ್ಲಿ ಕರೆಯಲು ಮಾನ್ಯ ಸಿಂಡಿಕೇಟ್ ಸದಸ್ಯರು ಕೋರಿದ್ದನ್ನು ಪರಿಗಣಿಸಿ ಆನ್‌ಲೈನ್ ಸಿಂಡಿಕೇಟ್ ಸಾಮಾನ್ಯ ಸಭೆಯನ್ನು ನಿಗಧಿಪಡಿಸಲು ನಿರ್ಣಯಿಸಿತು.

**2026–ಸಿಂ–3.20:** 2025–26ನೇ ಆರ್ಥಿಕ ವರ್ಷದ ದ್ವಿತೀಯ ಮತ್ತು ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅವಗಾಹನೆಗಾಗಿ ಸಲ್ಲಿಸಿದೆ.

ನಿರ್ಣಯ: ಚರ್ಚೆಯ ನಂತರ, ದಿನಾಂಕ:12–01–2026ರಂದು ನಡೆದ ವಿಶ್ವವಿದ್ಯಾಲಯದ ದ್ವಿತೀಯ ಹಣಕಾಸು ಸಮಿತಿ ಸಭೆ ಹಾಗೂ ದಿನಾಂಕ:23–02–2026ರಂದು ನಡೆದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲಾಯಿತು.

## ಎಸ್ಟೇಟ್ ವಿಭಾಗ

**2026–ಸಿಂ–3.21:** ವಿಶ್ವವಿದ್ಯಾಲಯ ಆವರಣದಲ್ಲಿನ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿ, ವಾಹನದ ಮೂಲಕ ವಿಲೇವಾರಿ ಕಾರ್ಯಕ್ಕಾಗಿ ಸೂಕ್ತ ಗೂಡ್ಸ್ ವಾಹನವನ್ನು ಒದಗಿಸುವ ಸಂಬಂಧ ಇ-ಟೆಂಡರ್ ಮೂಲಕ ಕ್ರಮಕೈಗೊಂಡಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯ ಆವರಣದಲ್ಲಿನ ವಿವಿಧ ಕಟ್ಟಡಗಳು, ವಿದ್ಯಾರ್ಥಿನಿಲಯಗಳು, ವಸತಿಗೃಹಗಳು, ಅತಿಥಿಗೃಹ, ಕ್ಯಾಂಟೀನ್, ರಸ್ತೆಗಳು ಮತ್ತು ಇತರೆಡೆಗಳಲ್ಲಿ ಸಂಗ್ರಹಿಸಿದ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವ ಕಾರ್ಯಕ್ಕಾಗಿ ಸೂಕ್ತ ಗೂಡ್ಸ್ ವಾಹನವನ್ನು ಒದಗಿಸುವ ಸಂಬಂಧ ಮೂರನೇ ಬಾರಿಗೆ ನಡೆಸಲಾದ ಮರು ಇ-ಟೆಂಡರ್ ಪ್ರಕ್ರಿಯೆಯಲ್ಲಿ ಉಳಿದವರಿಗಿಂತ ಕಡಿಮೆ ಮಾಸಿಕ ಬಾಡಿಗೆ ದರ ರೂ.22,800/–ಗಳನ್ನು (ಇಂಧನ, ಡ್ರೈವರ್ ಮತ್ತು ಅನ್ವಯವಾಗುವ ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ) ನಮೂದಿಸಿದ್ದ ಶ್ರೀ ಪಾಂಡುರಂಗ ಆರ್. ಗೋಣೀಬೀಡು ಇವರ ಟೆಂಡರ್‌ನ್ನು, ಟೆಂಡರ್ ಪರಿಶೀಲನಾ ಸಮಿತಿಯ ನಿರ್ಣಯದಂತೆ ಅನುಮೋದಿಸಿ, ವಾಹನದ ತುರ್ತು ಅತ್ಯವಿದ್ದುದ್ದರಿಂದ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ ದಿನಾಂಕ:01–02–2026 ರಿಂದ 31–02–2028 ರವರೆಗೆ ಎರಡು ವರ್ಷಗಳ ಅವಧಿಗೆ ಕರಾರು ಒಪ್ಪಂದ ಮಾಡಿಕೊಂಡು, ಸರಬರಾಜು ಆದೇಶ ನೀಡಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿ ಅನುಮೋದಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

## ಸಂಶೋಧನೆ ಮತ್ತು ಅಭಿವೃದ್ಧಿ ಘಟಕ

**2026–ಸಿಂ–3.22:** ಡಾ. ರಾಜ ನಾಯಕ, ಹಿರಿಯ ಪ್ರಾಧ್ಯಾಪಕರು, ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಭಾಗ – ಇವರು ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡಿರುವುದರ ಕುರಿತು.

**ನಿರ್ಣಯ:** ಡಾ. ರಾಜ ನಾಯಕ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ ಇವರು ದಿನಾಂಕ:18–12–2025 ರಿಂದ 20–12–2025ರವರೆಗೆ ಶ್ರೀಲಂಕಾ ದೇಶದ ಕೊಲಂಬೋದಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ Evaluation of Nutritional and Nutraceutical properties of Mocrocybe crassa (Sace) Pegler & Lodge 1998, A wild mushroom of Western Ghats of Karnataka, India ಎಂಬ ವಿಷಯದ ಕುರಿತು ಪ್ರಬಂಧ ಮಂಡಿಸಲು ಶ್ರೀಲಂಕಾಗೆ ಹೋಗಿ ಬರಲು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಆದೇಶ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಅನುಮೋದಿಸಿ ಸ್ಥಿರೀಕರಿಸಿದ ಸಭೆಯು, ಅವರಿಗೆ ಪ್ರಯಾಣ ಭತ್ಯೆ/ದಿನಭತ್ಯೆಗಳಲ್ಲಿ ಶೇ.50ರಷ್ಟು ಹಾಗೂ ನೋಂದಣಿ ಶುಲ್ಕ ಶೇ.50ರಷ್ಟು ಅಥವಾ ಗರಿಷ್ಟ $200 ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಗತಿಗನುಗುಣವಾಗಿ ಪಾವತಿಸಲು ಅನುಮತಿಸಿತು.

**2026–ಸಿಂ–3.23:** ವಿಶ್ವವಿದ್ಯಾಲಯದಲ್ಲಿ ಸೌರ ವಿದ್ಯುದೀಕರಣ ಅಳವಡಿಸುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ದೈನಂದಿನ ಶೈಕ್ಷಣಿಕ, ಸಂಶೋಧನೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳಿಗೆ ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ಅಡಚಣೆಯಾಗುತ್ತಿದೆ. ಅಲ್ಲದೆ ಇತ್ತೀಚೆಗೆ ವಿದ್ಯುತ್ ದರ ಕೂಡ ಏರಿಕೆಯಾಗುತ್ತಿದೆ. ವಿದ್ಯುತ್ ಶುಲ್ಕ ಮಾಸಿಕ ರೂ.12 ರಿಂದ ರೂ.14 ಲಕ್ಷಗಳನ್ನು ಪಾವತಿಸಬೇಕಾಗಿರುತ್ತದೆ. ಇದರಿಂದ ವಿಶ್ವವಿದ್ಯಾಲಯದ ದೈನಂದಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳನ್ನು ಸುಗಮವಾಗಿ ನಿರ್ವಹಿಸಲು ಹಾಗೂ ಆರ್ಥಿಕ ಮಿತವ್ಯಯ ಸಾಧಿಸಲು ಸಕಾರಾತ್ಮಕವಾಗಿಲ್ಲದ ಪ್ರಯುಕ್ತ ವಿಶ್ವವಿದ್ಯಾಲಯವು ಸೋಲಾರ್ ಪೆನಾಲ್‌ನ್ನು ಅಳವಡಿಸಲು ನಿರ್ಧರಿಸಿರುತ್ತದೆ. ಈ ಸಂಬಂಧ ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಸರ್ಕಾರವು ಸೋಲಾರ್ ಪೆನಾಲ್ ಅಳವಡಿಸುವ ಬಗ್ಗೆಯು ಸಹ ಪ್ರಸ್ತಾಪಿಸಿರುತ್ತದೆ. ವಿಶ್ವವಿದ್ಯಾಲಯವು ರಾಜ್ಯ ಮತ್ತು ಕೇಂದ್ರ ಸರ್ಕಾರಿ ಸ್ವಾಮ್ಯದ ಅನುದಾನಿತ ಸಂಸ್ಥೆಗಳಿಂದ ಮತ್ತು ಅಂತರರಾಷ್ಟ್ರೀಯ ಅನುದಾನಿತ ಸಂಸ್ಥೆಗಳಿಂದ ಅನುದಾನ ಪಡೆದು ಸಂಶೋಧನೆಗೆ ಅಗತ್ಯವಾದ ವೈಜ್ಞಾನಿಕ ಉಪಕರಣಗಳನ್ನು ಆಮದು ಮಾಡಿಕೊಂಡು ಅವುಗಳನ್ನು ಯಶಸ್ವಿಯಾಗಿ ಅಳವಡಿಸಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಂಶೋಧನೆ ಮತ್ತು ಶೈಕ್ಷಣಿಕ ಚಟುವಟಿಕೆಗಳನ್ನು ಯಶಸ್ವಿಯಾಗಿ ಕೈಗೊಂಡಿರುತ್ತದೆ. ಅಲ್ಲದೆ ವೈಜ್ಞಾನಿಕ ಉಪಕರಣಗಳಿಗೆ ಹಾಗೂ ಗಣಕ ಯಂತ್ರಗಳಿಗೆ, ಅಂತರ್‌ಜಾಲವನ್ನು ಯಶಸ್ವಿಯಾಗಿ ಬಳಸುವುದಕ್ಕೆ, ಸಮ್ಮೇಳನ ಸಭೆಯಲ್ಲಿ ಭಾಗವಹಿಸುವುದಕ್ಕೆ ಹಾಗೂ ಸಭೆ ನಡೆಸುವುದಕ್ಕೆ, ಸ್ಮಾರ್ಟ್‌ಕ್ಲಾಸ್ ತರಗತಿಗಳನ್ನು ಕೈಗೊಳ್ಳಲು ಮತ್ತು ಇತರೆ ಶೈಕ್ಷಣಿಕ ಚಟುವಟಿಕೆಗಳಿಗೆ ನಿರಂತರ ವಿದ್ಯುತ್ ಪೂರೈಕೆ ಅಗತ್ಯವಾಗಿರುತ್ತದೆ.

ಆದುದರಿಂದ, ವಿಶ್ವವಿದ್ಯಾಲಯದ ಕ್ಯಾಂಪಸ್ ಮತ್ತು ಸಹ್ಯಾದ್ರಿ ವಿಜ್ಞಾನ ಕಾಲೇಜು ಶಿವಮೊಗ್ಗ ಇಲ್ಲಿ ಸೋಲಾರ್ ಪೆನಾಲ್‌ನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಕ್ರೆಡೆಲ್ ಕರ್ನಾಟಕ ಸರ್ಕಾರದ ಅಂಗಸಂಸ್ಥೆಯಾದ Karnatak Renewable Energy Development Limited (KREDL) Bangalore ಇವರೊಂದಿಗೆ MoU ಮಾಡಿಕೊಳ್ಳುವ ಸಂಬಂಧ ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು KREDL ಸಂಸ್ಥೆಯ ಅಧಿಕಾರಿಗಳ ಜೊತೆಗೆ ಹಲವು ಬಾರಿ ಸುದೀರ್ಘ ಸಮಾಲೋಚನೆ ನಡೆಸಿ ಸ್ಥಳ ಪರಿಶೀಲನೆ ಮಾಡಲಾಗಿದೆ. ಈ ಯೋಜನೆಯಿಂದ ಪ್ರತಿ ಮಾಹೆಯ ವಿದ್ಯುತ್ ಬಿಲ್ಲಿನಲ್ಲಿ ಸುಮಾರು 09 ಲಕ್ಷಗಳವರೆಗೆ ಉಳಿತಾಯವಾಗುತ್ತದೆ ಎಂದು ಅಂದಾಜಿಸಲಾಗಿದೆ. ಈ ಸೋಲಾರ್ ಪೆನಾಲ್ ಯೋಜನೆಯ ಅನುಷ್ಠಾನದಿಂದ ವಾರ್ಷಿಕವಾಗಿ ಸುಮಾರು 704kWAC ವಿದ್ಯುತ್ ಉತ್ಪಾದನೆ ಮಾಡುವ ಉದ್ದೇಶವಿದ್ದು, ಸದರಿ ಯೋಜನೆಯ ಒಡಂಬಡಿಕೆಯು 25 ವರ್ಷಗಳ ಅವಧಿಯದ್ದಾಗಿದ್ದು, 25 ವರ್ಷಗಳ ನಂತರ ಹೆಚ್ಚುವರಿಯಾಗಿ ಇನ್ನೂ ಮುಂದುವರೆದು 03 ವರ್ಷಗಳ ಅವಧಿಯವರೆಗೆ ಊರ್ಜಿತದಲ್ಲಿರುತ್ತದೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸುಮಾರು ರೂ.300/–ಲಕ್ಷಗಳು ಅವಶ್ಯವಿದ್ದು ಸದರಿ ಮೊತ್ತದ ಬಂಡವಾಳವನ್ನು Karnatak Renewable Energy Development Limited (KREDL) Bangalore ಇವರು ಹೂಡಿಕೆ ಮಾಡಲು ಒಪ್ಪಿರುತ್ತಾರೆ. ಈ ಯೋಜನೆಯಿಂದ ಉತ್ಪಾದನೆಯಾಗಲಿರುವ ವಿದ್ಯುಚ್ಛಕ್ತಿಯ ದರವನ್ನು ಪ್ರತಿ ಯೂನಿಟಿಗೆ ರೂ.4.61 ರಂತೆ ವಿಶ್ವವಿದ್ಯಾಲಯಕ್ಕೆ ಸರಬರಾಜು ಮಾಡಲು ಒಡಂಬಡಿಕೆಯನ್ವಯ ನಿಗದಿಪಡಿಸಲಾಗಿದೆ. ಈ ಸಂಬಂಧ ಸದರಿ ಸಂಸ್ಥೆಗೆ ವಿಶ್ವವಿದ್ಯಾಲಯವು ರೂ.24.00 ಲಕ್ಷಗಳನ್ನು ಮುಂಗಡವಾಗಿ ಪಾವತಿಸಬೇಕಾಗಿರುತ್ತದೆ.

ವಿಶ್ವವಿದ್ಯಾಲಯದ ಆವರಣದಲ್ಲಿ ಈ ಹಿಂದೆ ಹೊರಾಂಗಣ ಕ್ರೀಡಾಂಗಣ ನಿರ್ಮಿಸಲು ನಿಗದಿಪಡಿಸಿದ್ದ ಸ್ಥಳದಲ್ಲಿ ಎರಡು ಎಕರೆ ಜಾಗವನ್ನು ಸೋಲಾರ್ ಪೆನಾಲ್ ಅಳವಡಿಸಲು ನಿಗದಿಪಡಿಸಲಾಗಿದೆ. ಸದರಿ ಸ್ಥಳವು ಸೋಲಾರ್ ಪೆನಾಲ್ ಅಳವಡಿಸಲು ಯೋಗ್ಯವಾಗಿರುವುದಾಗಿ KREDL ಸಂಸ್ಥೆಯವರು ಸ್ಥಳ ಪರಿಶೀಲನೆ ಮಾಡಿ ಶಿಫಾರಸ್ಸು ಮಾಡಿರುತ್ತಾರೆ. ಈ ಯೋಜನೆಯಿಂದ ಯಾವುದೇ ಮರಗಳನ್ನು ಕಟಾವಣೆ ಮಾಡುವ ಪ್ರಮೇಯವೇ ಉದ್ಭವವಾಗುವುದಿಲ್ಲ. ಅಲ್ಲದೆ, ಈ ಭಾಗವು ನೆರಳು ರಹಿತ ಪ್ರದೇಶವಾಗಿರುತ್ತದೆ. ವಿಶ್ವವಿದ್ಯಾಲಯಕ್ಕೆ ಅರಣ್ಯ ಇಲಾಖೆಯಿಂದ ಮಂಜೂರಾಗಿರುವ ಭೂ ಪ್ರದೇಶದ ಗುತ್ತಿಗೆ ಅವಧಿ ನವೀಕರಣದ ಆನ್‌ಲೈನ್ ಪ್ರಸ್ತಾವನೆಯು ಈಗಾಗಲೆ PARIVESHರಲ್ಲಿ Stage-1 Clearance ಹಂತವು ಸಹ ಪೂರ್ಣಗೊಂಡಿರುತ್ತದೆ.

ಈ ಹಿನ್ನೆಲೆಯಲ್ಲಿ ಸೋಲಾರ್ ಪೆನಾಲ್ ಅಳವಡಿಸಲು ಅನುಮತಿಗಾಗಿ ಹಾಗೂ ಈ ಸಂಬಂಧ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ Karnatak Renewable Energy Development Limited (KREDL) Bangalore ಇವರಿಗೆ ರೂ.24,00,000/–(ರೂಪಾಯಿ ಇಪ್ಪತ್ತನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಮುಂಗಡ ಪಾವತಿಸಲು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಜ್ಞಾನಸಹ್ಯಾದ್ರಿ ಆವರಣ ಮತ್ತು ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ ಸೋಲಾರ್ ಪೆನಾಲ್ ಅಳವಡಿಸಲು ಅನುಮತಿಸಿದ ಸಭೆಯು ಈ ಸಂಬಂಧ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ Karnatak Renewable Energy Development Limited (KREDL), Bangalore ಇವರಿಗೆ ರೂ.24,00,000/– (ರೂಪಾಯಿ ಇಪ್ಪತ್ತನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಗಳನ್ನು ಮುಂಗಡ ಪಾವತಿಸಲು ಅನುಮೋದಿಸಿತು.

**2026–ಸಿಂ–3.24:** ಡಾ. ಕುಮಾರಸ್ವಾಮಿ ಹೆಚ್.ಎಂ. ಪ್ರಾಧ್ಯಾಪಕರು, ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ ಇವರು ಅಂತರರಾಷ್ಟ್ರೀಯ ವಿಚಾರ ಸಂಕೀರಣದಲ್ಲಿ ಪ್ರಬಂಧ ಮಂಡನೆಗೆ ಭಾಗವಹಿಸಲು ಅನುಮೋದನೆ ನೀಡಿರುವುದರ ಕುರಿತು.

**ನಿರ್ಣಯ:** ಡಾ.ಕುಮಾರಸ್ವಾಮಿ, ಹೆಚ್.ಎಂ., ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ ಇವರು Inter-disciplinary Science and Education, Gla Lai, Vietnam ಇಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ Garcinia talbotii fruit extract and its active principle oblongifolin A sensitizes chemoresistance in MIA Paa-2/Pane-I Pancreatic cancer cell lines ಎಂಬ ಪ್ರಬಂಧ ಮಂಡಿಸಲು ಪ್ರಯಾಣದ ದಿನಗಳು ಸೇರಿದಂತೆ ದಿನಾಂಕ:25–03–2026 ರಿಂದ 30–03–2026ರವರೆಗೆ ವಿಯಟ್ನಾಂಗೆ ಹೋಗಿ ಬರಲು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಆದೇಶ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಅನುಮೋದಿಸಿ ಸ್ಥಿರೀಕರಿಸಿದ ಸಭೆಯು, ಸದರಿ ಅವಧಿಗೆ ಅವರಿಗೆ ಅನ್ಯಕಾರ್ಯನಿಮಿತ್ತ ರಜೆ ಮಂಜೂರು ಮಾಡಲು ಮತ್ತು ಪ್ರಯಾಣ ಭತ್ಯೆ/ ದಿನಭತ್ಯೆಗಳಲ್ಲಿ ಶೇ.50ರಷ್ಟು ಹಾಗೂ ನೋಂದಣಿ ಶುಲ್ಕ ಶೇ.50ರಷ್ಟು ಅಥವಾ ಗರಿಷ್ಠ $200 ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಗತಿಗನುಗುಣವಾಗಿ ಪಾವತಿಸಲು ಸಭೆಯು ಅನುಮೋದನೆ ನೀಡಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
... 577 451

2026–ಸಿಂ–3.24(ಎ): ಡಾ. ಪ್ರದೀಪ್ ಕೆ. ಸಹಾಯಕ ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು – ಇವರು ಅಂತರರಾಷ್ಟ್ರೀಯ ವಿಚಾರ ಸಂಕೀರಣದಲ್ಲಿ ಪ್ರಬಂಧ ಮಂಡನೆಗೆ ಭಾಗವಹಿಸಲು ಅನುಮೋದನೆ ನೀಡುವ ಕುರಿತು.

ನಿರ್ಣಯ: ಶಿವಮೊಗ್ಗದ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಜೈವಿಕತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ಪ್ರದೀಪ್ ಕೆ. ಇವರು Inter-disciplinary Science and Education, Gla Lai, Vietnam ಇಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ Isolation and Structural Characterization of a Triterpenoid Saponin, Barringtogenol C Glycoside, from Barringtonia acutangula Fruit and its Anticancer Potential Against Hepatocellur Carcinoma ಎಂಬ ಪ್ರಬಂಧ ಮಂಡಿಸಲು ಪ್ರಯಾಣದ ದಿನಗಳು ಸೇರಿದಂತೆ ದಿನಾಂಕ:25–03–2026 ರಿಂದ 30–03–2026ರವರೆಗೆ ವಿಯಟ್ನಾಂಗೆ ಹೋಗಿ ಬರಲು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಆದೇಶ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಅನುಮೋದಿಸಿ ಸ್ಥಿರೀಕರಿಸಿದ ಸಭೆಯು, ಅವರಿಗೆ ಪ್ರಯಾಣ ಭತ್ಯೆ/ದಿನಭತ್ಯೆಗಳಲ್ಲಿ ಶೇ.50ರಷ್ಟು ಹಾಗೂ ನೋಂದಣಿ ಶುಲ್ಕ ಶೇ.50ರಷ್ಟು ಅಥವಾ ಗರಿಷ್ಠ $200 ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಗತಿಗನುಗುಣವಾಗಿ ಪಾವತಿಸಲು ಅನುಮತಿಸಿತು.

2026–ಸಿಂ–3.24(ಬಿ): ಡಾ. ವರುಣ್ ಕುಮಾರ ಜೆ.ಬಿ, ಸಹಾಯಕ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು – ಇವರು ಅಂತರರಾಷ್ಟ್ರೀಯ ವಿಚಾರ ಸಂಕೀರಣದಲ್ಲಿ ಪ್ರಬಂಧ ಮಂಡನೆಗೆ ಭಾಗವಹಿಸಲು ಅನುಮೋದನೆ ನೀಡುವ ಕುರಿತು.

ನಿರ್ಣಯ: ಡಾ. ವರುಣ್ ಕುಮಾರ ಜೆ.ಬಿ, ಸಹಾಯಕ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು ಶಿವಮೊಗ್ಗ ಇವರು Inter-disciplinary Science and Education, Gla Lai, Vietnam ಇಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ Up-scaling study for optimized formulation and experimental validation of chitosan nanoparticles loaded-curcumin in hyeprlipidemic rats ಎಂಬ ಪ್ರಬಂಧ ಮಂಡಿಸಲು ಪ್ರಯಾಣದ ದಿನಗಳು ಸೇರಿದಂತೆ ದಿನಾಂಕ:25–03–2026 ರಿಂದ 30–03–2026ರವರೆಗೆ ವಿಯಟ್ನಾಂಗೆ ಹೋಗಿ ಬರಲು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಆದೇಶ ಹೊರಡಿಸಿದ ವಿಶ್ವವಿದ್ಯಾಲಯದ ಕ್ರಮವನ್ನು ಅನುಮೋದಿಸಿ ಸ್ಥಿರೀಕರಿಸಿದ ಸಭೆಯು, ಅವರಿಗೆ ಪ್ರಯಾಣ ಭತ್ಯೆ/ದಿನಭತ್ಯೆಗಳಲ್ಲಿ ಶೇ.50ರಷ್ಟು ಹಾಗೂ ನೋಂದಣಿ ಶುಲ್ಕ ಶೇ.50ರಷ್ಟು ಅಥವಾ ಗರಿಷ್ಠ $200 ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ವಿಶ್ವವಿದ್ಯಾಲಯದ ಆರ್ಥಿಕ ಸ್ಥಿತಿಗತಿಗನುಗುಣವಾಗಿ ಪಾವತಿಸಲು ಅನುಮತಿಸಿತು.

2026–ಸಿಂ–3.24(ಸಿ): MANIPAL ACADEMY OF HIGHER EDUCATION MANIPAL ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು.

ನಿರ್ಣಯ: ಕೇಂದ್ರ ಸರ್ಕಾರದ DST-Anusandhana National Research Foundation (ANRF) ರವರು MANIPAL ACADEMY OF HIGHER EDUCATION MANIPAL ರವರಿಗೆ Partnerships for Accelerated Innovation and Research (PAIR) Pragramme ಅಡಿಯಲ್ಲಿ ಸಂಶೋಧನಾ ಅನುದಾನ ಮಂಜೂರಾಗಿದ್ದು, ಸದರಿ ಸಂಶೋಧನಾ ಯೋಜನೆಗೆ ಕುವೆಂಪು ವಿಶ್ವವಿದ್ಯಾಲಯವು ಕೂಡ ಭಾಗಿಯಾಗಿರುತ್ತದೆ. ಆದ್ದರಿಂದ ಕುವೆಂಪು ವಿಶ್ವವಿದ್ಯಾಲಯದ ಅಧ್ಯಾಪಕರು, ಸಂಶೋಧನಾರ್ಥಿಗಳು, ವಿದ್ಯಾರ್ಥಿಗಳು, ಶೈಕ್ಷಣಿಕ/ಸಂಶೋಧನೆ/ತರಬೇತಿ/ ಆಡಳಿತಾತ್ಮಕ ವಿಷಯಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಮತ್ತು ಸಂಶೋಧನೆಯನ್ನು ಅಭಿವೃದ್ಧಿಪಡಿಸಲು ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಅನುಮತಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

2026–ಸಿಂ–3.24 (ಡಿ): ವಿಶ್ವವಿದ್ಯಾಲಯದ ಕ್ಯಾಂಪಸ್ ನಿರ್ವಹಣೆಗೆ "ವ್ಯಾಪಕ ತ್ಯಾಜ್ಯ ನಿರ್ವಹಣೆ ಮತ್ತು ಸುಸ್ಥಿರ" ಕೈಪಿಡಿಯನ್ನು ಹೊರತರಲು ಅನುಮೋದನೆ ನೀಡುವ ಕುರಿತು.

ಕುವೆಂಪು ವಿಶ್ವವಿದ್ಯಾಲಯವು ಕರ್ನಾಟಕ ಸರ್ಕಾರದ ಇತ್ತೀಚಿನ ಆದೇಶಗಳನ್ವಯ ಜ್ಞಾನ ಸಹ್ಯಾದ್ರಿ ಆವರಣವನ್ನು ಮಾದರಿ "ವನ್ಯಜೀವಿ ಸ್ನೇಹಿ ಹಸಿರು ಕ್ಯಾಂಪಸ್" ಆಗಿ ಪರಿವರ್ತಿಸುವ ಉದ್ದೇಶದಿಂದ ಪ್ರೊ.ಯೋಗೇಂದ್ರ ಕೆ. ಅಧ್ಯಕ್ಷರು. ಸ್ನಾತಕೋತ್ತರ ಪರಿಸರ ಅಧ್ಯಯನ ವಿಭಾಗ ಇವರು ಸಿದ್ಧಪಡಿಸಿರುವ **"ವ್ಯಾಪಕ ತ್ಯಾಜ್ಯ ನಿರ್ವಹಣೆ ಮತ್ತು ಸುಸ್ಥಿರ"** ಕೈಪಿಡಿಯನ್ನು ಸಿದ್ಧಪಡಿಸಿದ್ದು, ಅದನ್ನು ಅನುಷ್ಠಾನಗೊಳಿಸಲು ಏಕಬಳಕೆಯ ಪ್ಲಾಸ್ಟಿಕ್ ನಿಷೇಧ ಉಕ್ಕು ಮತ್ತು ತಾಮ್ರದ ಪಾತ್ರೆಗಳ ಬಳಕೆ, ನಂದಿನಿ ಉತ್ಪನ್ನಗಳನ್ನು ಬಳಸುವುದು, ವಿವಿಧ ಸ್ಥಳಗಳಲ್ಲಿ ಮಾರ್ಗಸೂಚಿಗಳ ಅಳವಡಿಕೆ, ತ್ಯಾಜ್ಯ ನಿರ್ವಹಣಾ ಯೋಜನೆಗಳು, ಡಿಜಿಟಲ್ ಮೇಲ್ವಿಚಾರಣಾ ವ್ಯವಸ್ಥೆ, ವನ್ಯ ಜೀವಿ ಮತ್ತು ಅರಣ್ಯ ಸಂರಕ್ಷಣೆ ಮುಂತಾದ ಅಂಶಗಳನ್ನು ಒಳಗೊಂಡ ಕೈಪಿಡಿಯನ್ನು ಅನುಮೋದಿಸಿದ ಸಭೆಯು ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ನಿರ್ಣಯಿಸಿತು.

## ಶೈಕ್ಷಣಿಕ ವಿಭಾಗ

**2026–ಸಿಂ–3.25:** ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿರುವ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಪ್ರಾಕ್ತನಶಾಸ್ತ್ರ ಮತ್ತು ವಸ್ತುಸಂಗ್ರಹಾಲಯ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯ ಗುಚ್ಛಗಳ ಪ್ರವೇಶ ಪುನರಾರಂಭ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಘಟಕ ಕಾಲೇಜಾಗಿರುವ ಶಿವಮೊಗ್ಗ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ 1995–96ನೇ ಶೈಕ್ಷಣಿಕ ಸಾಲಿನಿಂದ ಚಾಲ್ತಿಯಲ್ಲಿದ್ದ ಪ್ರಾಕ್ತನಶಾಸ್ತ್ರ ಮತ್ತು ವಸ್ತುಸಂಗ್ರಹಾಲಯ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಷಯ ಗುಚ್ಛಗಳಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಾದ ಹಿನ್ನೆಲೆಯಲ್ಲಿ, 2016–17ನೇ ಶೈಕ್ಷಣಿಕ ಸಾಲಿನಿಂದ ಸದರಿ ವಿಷಯ ಗುಚ್ಛಗಳನ್ನು ಪ್ರವೇಶಾತಿಯಿಂದ ಕೈಬಿಡಲಾಗಿದ್ದು, ಪ್ರಸ್ತುತ, ಸದರಿ ವಿಷಯ ಗುಚ್ಛಗಳಿಗೆ ವಿದ್ಯಾರ್ಥಿಗಳು ಪ್ರವೇಶ ಬಯಸುತ್ತಿರುವುದರಿಂದ ಪ್ರತಿ ವಿಷಯಕ್ಕೆ ತಲಾ 30 ವಿದ್ಯಾರ್ಥಿಗಳ ಸಂಖ್ಯೆಯೊಂದಿಗೆ 2026–27ನೇ ಶೈಕ್ಷಣಿಕ ಸಾಲಿನಿಂದ ಪುನರಾರಂಭ ಮಾಡಲು ಸಭೆಯು ಅನುಮತಿಸಿತು.

**2026–ಸಿಂ–3.26:** 2026–27ನೇ ಶೈಕ್ಷಣಿಕ ಸಾಲಿನಿಂದ ಬಿ.ಇಡಿ. ಪದವಿ ಒಳಗೊಂಡಂತೆ ಎಲ್ಲಾ ಸ್ನಾತಕ ಪದವಿಗಳಿಗೆ ಪ್ರವೇಶಾತಿ ಶುಲ್ಕವನ್ನು ಪರಿಷ್ಕರಣೆ ಮಾಡುವ ಕುರಿತು.

**ನಿರ್ಣಯ:** 2026–27ನೇ ಶೈಕ್ಷಣಿಕ ವಿಶ್ವವಿದ್ಯಾಲಯದ ಸಾಲಿನಿಂದ ಬಿ.ಇಡಿ. ಪದವಿ ಒಳಗೊಂಡಂತೆ ಎಲ್ಲಾ ಸ್ನಾತಕ ಪದವಿಗಳಿಗೆ ಪ್ರವೇಶಾತಿ ಶುಲ್ಕಗಳನ್ನು ಸರ್ಕಾರದ ಏಕರೂಪ ಶುಲ್ಕಗಳನ್ನು ನಿಗದಿಪಡಿಸುವಂತೆ ಕ್ರಮಕೈಗೊಳ್ಳಲು ಸೂಚಿಸಿರುವ ಮೇರೆಗೆ, ದಿನಾಂಕ:21-01-2026 ರಂದು ನಡೆದ ಶುಲ್ಕ ಪರಿಷ್ಕರಣಾ ಸಮಿತಿ ಸಭೆಯ ನಿರ್ಣಯದಂತೆ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ವ್ಯಾಪ್ತಿಯ ಸ್ನಾತಕ ಪದವಿ ಕಾಲೇಜುಗಳಿಗೆ ಹೆಚ್ಚಾಗಿ ಗ್ರಾಮೀಣ ಪ್ರದೇಶದ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯುವುದರಿಂದ ಸರ್ಕಾರದ ಏಕರೂಪ ಶುಲ್ಕವನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಿದರೆ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಹೊರೆಯಾಗುವ ಹಿನ್ನೆಲೆಯಲ್ಲಿ ಎಲ್ಲಾ ಸ್ನಾತಕ ಪದವಿಗಳ ಶುಲ್ಕಗಳನ್ನು ಚಾಲ್ತಿಯಲ್ಲಿರುವ ಶುಲ್ಕಗಳಿಗೆ ರೂ.1000/– ರಿಂದ ರೂ.1500/–ರವರಗೆ ಹೆಚ್ಚಿಸಿ ಪರಿಷ್ಕರಣೆ ಮಾಡಲು ಸಭೆಯು ಅನುಮೋದನೆ ನೀಡಿತು.

**2026–ಸಿಂ–3.26(ಎ):** **"ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿಗೆ"** ಶಾಶ್ವತ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಕುರಿತು.

**ಚರ್ಚೆ:** ಕುಲಸಚಿವರು ಮಾತನಾಡಿ, ಶಿವಮೊಗ್ಗದ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿಗೆ ನೀಡಿರುವ ಮೂರು ವರ್ಷಗಳ ಪಿಹೆಚ್.ಡಿ. ಸಂಶೋಧನಾ ಕೇಂದ್ರದ ಮಾನ್ಯತಾ ಅವಧಿಯು ದಿನಾಂಕ:27–04–2025ಕ್ಕೆ ಮುಕ್ತಾಯವಾಗಿದೆ. ಸದರಿ ಕಾಲೇಜಿನಲ್ಲಿ ಸ್ನಾತಕ ಬಿ.ಕಾಂ., ಬಿ.ಬಿ.ಎ.,



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
-577 451

ಬಿ.ಬಿ.ಎ.(ಟಿ.ಟಿ.ಎಂ) ಕೋರ್ಸ್‌ಗಳು ಮತ್ತು ಸ್ನಾತಕೋತ್ತರ ಎಂ.ಕಾಂ. ಮತ್ತು ಎಂ.ಬಿ.ಎ. ಕೋರ್ಸ್‌ಗಳಿವೆ. ಕಾಲೇಜಿನಲ್ಲಿ 06 ಜನ ಸಂಶೋಧನಾ ಮಾರ್ಗದರ್ಶಕರಿದ್ದಾರೆ. ಪಿಹೆಚ್.ಡಿ. ಸಂಶೋಧನೆಗೆ ಕಾಲೇಜಿನಲ್ಲಿ ಎಲ್ಲಾ ಅಗತ್ಯ ಮೂಲಭೂತ ಸೌಲಭ್ಯಗಳಿವೆ. ಸದರಿ ಕಾಲೇಜು ವಿಶ್ವವಿದ್ಯಾಲಯದ ಘಟಕ ಕಾಲೇಜಾಗಿರುವುದರಿಂದ, ಪಿಹೆಚ್.ಡಿ. ಸಂಶೋಧನಾ ಕೇಂದ್ರದ ನವೀಕರಣವನ್ನು ಮೂರು ವರ್ಷದ ತಾತ್ಕಾಲಿಕದ ಬದಲಾಗಿ ಶಾಶ್ವತ ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಪರಿಗಣಿಸುವ ಸಂಬಂಧ ವಿಷಯವನ್ನು ಅನುಮೋದನೆಗಾಗಿ ಮಂಡಿಸಿದೆ ಎಂದರು.

ಇದನ್ನು ಅನುಮೋದಿಸಿದ ಎಲ್ಲಾ ಸದಸ್ಯರು ವಿಶ್ವವಿದ್ಯಾಲಯದ ಇನ್ನೆರಡು ಘಟಕ ಕಾಲೇಜುಗಳಾದ ಸಹ್ಯಾದ್ರಿ ಕಲಾ ಕಾಲೇಜು ಮತ್ತು ಸಹ್ಯಾದ್ರಿ ವಿಜ್ಞಾನ ಕಾಲೇಜುಗಳು ಕೂಡ ಸಂಶೋಧನಾ ಕೇಂದ್ರಕ್ಕೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿದ್ದು, ಅವುಗಳಿಗೆ ಕೂಡ ಮೂರು ವರ್ಷದ ತಾತ್ಕಾಲಿಕದ ಬದಲಾಗಿ ಶಾಶ್ವತ ಸಂಶೋಧನಾ ಕೇಂದ್ರದ ಮಾನ್ಯತೆಗಾಗಿ ಪರಿಗಣಿಸಬಹುದು ಎಂದರು.

ಡಾ.ಚಿದಾನಂದರವರು ಮಾತನಾಡಿ, ಶಿವಮೊಗ್ಗದ ರಾಷ್ಟ್ರೀಯ ಶಿಕ್ಷಣ ಕಾಲೇಜಿನಲ್ಲಿ 06 ಜನ ಪಿಹೆಚ್.ಡಿ. ಪದವಿ ಪಡೆದಿರುವ ಅಧ್ಯಾಪಕರಿದ್ದು, ನಿಯಮಗಳಲ್ಲಿ ಸ್ನಾತಕೋತ್ತರ ಕೋರ್ಸ್ ಇರಬೇಕು ಎಂದಿದೆ. ಅದನ್ನು ಮಾರ್ಪಡಿಸಿ ನಮಗೂ ಸಂಶೋಧನಾ ಕೇಂದ್ರ ನೀಡಿ ಎಂದರು. ಕುಲಸಚಿವರು ಮಾತನಾಡಿ, ಸಂಶೋಧನಾ ಕೇಂದ್ರಗಳನ್ನು ಯು.ಜಿ.ಸಿ. ನಿಯಮಗಳು ಮತ್ತು ವಿಶ್ವವಿದ್ಯಾಲಯದ ರೆಗ್ಯುಲೇಷನ್ ಪ್ರಕಾರವೇ ನೀಡಲಾಗುವುದು. ಆದಾಗ್ಯೂ ಈ ಹಿಂದಿನ ಸಭೆಯಲ್ಲಿ ನಿರ್ಣಯಿಸಿರುವಂತೆ ವಿಶ್ವವಿದ್ಯಾಲಯದಿಂದ ಸುತ್ತೋಲೆ ಹೊರಡಿಸಲಾಗುವುದು. ಕಾಲೇಜುಗಳಿಂದ ಅರ್ಜಿ ಸಲ್ಲಿಸಿದಲ್ಲಿ ನಿಯಮಗಳಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದರು.

**ನಿರ್ಣಯ:** ಚರ್ಚೆಯ ನಂತರ ಶಿವಮೊಗ್ಗದ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಸಹ್ಯಾದ್ರಿ ಕಲಾ ಕಾಲೇಜು ಹಾಗೂ ಸಹ್ಯಾದ್ರಿ ವಿಜ್ಞಾನ ಕಾಲೇಜುಗಳು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿರುವುದರಿಂದ ಹಾಗೂ ಪಿಹೆಚ್.ಡಿ. ಸಂಶೋಧನಾ ಕೇಂದ್ರಕ್ಕೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಹೊಂದಿರುವುದರಿಂದ ಸಂಶೋಧನಾ ಕೇಂದ್ರದ ನವೀಕರಣವನ್ನು ಮೂರು ವರ್ಷದ ತಾತ್ಕಾಲಿಕದ ಬದಲಾಗಿ ಶಾಶ್ವತ ಸಂಶೋಧನಾ ಕೇಂದ್ರ ಮಾನ್ಯತೆ ನೀಡಲು ಸಭೆಯು ಸರ್ವಾನುಮತದಿಂದ ಅನುಮತಿಸಿತು ಮತ್ತು ಸಂಯೋಜಿತ ಕಾಲೇಜುಗಳು ಪಿಹೆಚ್.ಡಿ. ಸಂಶೋಧನಾ ಕೇಂದ್ರ ತೆರೆಯಲು ಅರ್ಜಿ ಸಲ್ಲಿಸುವ ಸಲುವಾಗಿ ವಿಶ್ವವಿದ್ಯಾಲಯದಿಂದ ಸುತ್ತೋಲೆ ಹೊರಡಿಸುವಂತೆ ನಿರ್ಣಯಿಸಲಾಯಿತು.

**2026–ಸಿಂ–3.26(ಬಿ):** ವಿಶ್ವವಿದ್ಯಾಲಯದ ಘಟಕ ಕಾಲೇಜು ಆಗಿರುವ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ **"ಇತಿಹಾಸ – ಐಚ್ಛಿಕ ಕನ್ನಡ – ರಾಜ್ಯಶಾಸ್ತ್ರ" (ಹೆಚ್.ಕೆ.ಪಿ.) ಐಚ್ಛಿಕ ವಿಷಯ ಗುಚ್ಛವನ್ನು** ಸೇರ್ಪಡೆಗೊಳಿಸುವ ಕುರಿತು.

**ನಿರ್ಣಯ:** ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಬೇಡಿಕೆ ಬರುತ್ತಿರುವುದಾಗಿ ಪ್ರಾಂಶುಪಾಲರು ಪ್ರಸ್ತಾವನೆ ಸಲ್ಲಿಸಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಘಟಕ ಕಾಲೇಜಾಗಿರುವ ಸಹ್ಯಾದ್ರಿ ಕಲಾ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ ಈಗಿರುವ ಐಚ್ಛಿಕ ವಿಷಯಗಳ ಜೊತೆಗೆ ಹೊಸದಾಗಿ **"ಇತಿಹಾಸ – ಐಚ್ಛಿಕ ಕನ್ನಡ – ರಾಜ್ಯಶಾಸ್ತ್ರ"(ಹೆಚ್.ಕೆ.ಪಿ.) ಐಚ್ಛಿಕ ವಿಷಯ ಗುಚ್ಛವನ್ನು** ಸೇರ್ಪಡೆಗೊಳಿಸಲು ಸಭೆಯು ಅನುಮತಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2026–ಸಿಂ–3.27:** ಶ್ರೀಮತಿ ಸುನೀಲಾ ಎಸ್. ಕಾಮತ್, ಹಿರಿಯ ಸಹಾಯಕರು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ಇವರು ದುಬೈ ಮತ್ತು ಅಬುದಾಬಿ ದೇಶಕ್ಕೆ ಹೋಗಿಬರಲು ಅನುಮತಿ ನೀಡಿರುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ನೌಕರರಾದ ಶ್ರೀಮತಿ ಸುನೀಲಾ ಎಸ್ ಕಾಮತ್, ಹಿರಿಯ ಸಹಾಯಕರು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ ಇವರು ದಿನಾಂಕ:01-02-2026 ರಿಂದ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

05-02-2026 ರವರೆಗೆ ದುಬೈ ಮತ್ತು ಅಬುದಾಬಿ ದೇಶಗಳಿಗೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಗೂ ಅವರ ಖಾತೆಯಲ್ಲಿರುವ ರಜೆಗಳನ್ನು ಉಪಯೋಗಿಸಿಕೊಂಡು ವಿದೇಶ ಪ್ರವಾಸಕ್ಕೆ ಹೋಗಿಬರಲು ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ, ಅನುಮತಿ ನೀಡಿದ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2026–ಸಿಂ–3.28:** ಶ್ರೀ ಅಂಜಿನಪ್ಪ, ಕಿರಿಯ ಸಹಾಯಕರು – ಇವರನ್ನು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಇಲ್ಲಿ ಖಾಲಿಯಿರುವ ಕಿರಿಯ ಸಹಾಯಕ ಹುದ್ದೆಗೆ ವರ್ಗಾವಣೆ ಮಾಡುವ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ, ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಹೆಚ್ಚಿನ ಸಂಖ್ಯೆಯ ಅಧ್ಯಾಪಕೇತರ ನೌಕರರು ನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ ಮತ್ತು ಹೊಸ ನೇಮಕಾತಿಗಳಿಗೆ ಅನುಮತಿ ಇಲ್ಲದಿರುವುದರಿಂದ ಖಾಯಂ ನೌಕರರ ಸಂಖ್ಯೆ ಕಡಿಮೆಯಾಗುತ್ತಿದ್ದು, ಇರುವ ನೌಕರರೇ ಹೆಚ್ಚಿನ ಕಾರ್ಯಭಾರ ನಿರ್ವಹಿಸಬೇಕಾಗಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ನೌಕರರಾದ ಶ್ರೀ ಅಂಜಿನಪ್ಪ, ಕಿರಿಯ ಸಹಾಯಕರು ಇವರನ್ನು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಇಲ್ಲಿ ಖಾಲಿಯಿರುವ ಕಿರಿಯ ಸಹಾಯಕ ಹುದ್ದೆಗೆ ವರ್ಗಾವಣೆ ಹೊಂದಲು ಅನುಮತಿ ನೀಡದಿರಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**2026–ಸಿಂ–3.28 (ಎ):** ಡಾ.ಕೆ.ಎಂ ಮಹಾದೇವನ್, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಡೂರು – ಇವರನ್ನು ಚಾಮರಾಜನಗರ ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಹುದ್ದೆಗೆ ನಿಯೋಜಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಡಾ.ಕೆ.ಎಂ ಮಹಾದೇವನ್. ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಡೂರು ಇವರನ್ನು ಕರ್ನಾಟಕ ಸರ್ಕಾರವು ಚಾಮರಾಜನಗರ ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಹುದ್ದೆಗೆ ನೇಮಕ ಮಾಡಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅನುಕೂಲವಾಗುವಂತೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸರ್ಕಾರದ ಅಧಿಸೂಚನೆಯಲ್ಲಿರುವ ಷರತ್ತಿಗೊಳಪಟ್ಟು ಕಾಲೇಜಿನ ಕರ್ತವ್ಯದಿಂದ ಬಿಡುಗಡೆಗೊಳಿಸಲಾದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

**2026–ಸಿಂ–3.28 (ಬಿ):** ಡಾ.ನಾಗರಾಜ ಎನ್. ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ – ಇವರನ್ನು ಹಾಸನ ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಹುದ್ದೆಗೆ ನಿಯೋಜಿಸಿರುವ ಕ್ರಮವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಡಾ.ನಾಗರಾಜ ಎನ್. ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇವರನ್ನು ಕರ್ನಾಟಕ ಸರ್ಕಾರವು ಹಾಸನ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಹುದ್ದೆಗೆ ನೇಮಕ ಮಾಡಿದ್ದು, ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅನುಕೂಲವಾಗುವಂತೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸರ್ಕಾರದ ಅಧಿಸೂಚನೆಯಲ್ಲಿರುವ ಷರತ್ತಿಗೊಳಪಟ್ಟು ಕಾಲೇಜಿನ ಕರ್ತವ್ಯದಿಂದ ಬಿಡುಗಡೆಗೊಳಿಸಲಾದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

**2026–ಸಿಂ–3.28 (ಸಿ):** ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಈ ಕೆಳಕಂಡ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿಭಾಗಾಧ್ಯಕ್ಷರ ಅವಧಿಯು ಮುಕ್ತಾಯಗೊಳ್ಳಲಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 34(7)ರನ್ವಯ ನೂತನ ವಿಭಾಗಾಧ್ಯಕ್ಷರನ್ನಾಗಿ ನೇಮಕ ಮಾಡಲು ಸರ್ವಾನುಮತದಿಂದ ಅನುಮೋದಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

| ಕ್ರ ಸಂ. | ಹೆಸರು ಮತ್ತು ಹುದ್ದೆ | ವಿಭಾಗ | ಅಧ್ಯಕ್ಷರಾಗಿ ನೇಮಕ ಮಾಡಬೇಕಾದ ದಿನಾಂಕ |
|---|---|---|---|
| 01 | ಡಾ.ಅಂಜನಪ್ಪ, ಬಿ.ಹೆಚ್. ಪ್ರಾಧ್ಯಾಪಕರು | ಸಮಾಜಶಾಸ್ತ್ರ | 06-10-2026 |
| 02 | ಡಾ.ಸತೀಶ್‌ಕುಮಾರ್ ಪ್ರಾಧ್ಯಾಪಕರು | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | 06-10-2026 ರಿಂದ ಅಥವಾ ಡಾ.ವರ್ಗೀಸ್ ರವರ ಕೋರಿಕೆಯಂತೆ ಅವರು ವಿದೇಶಕ್ಕೆ ತೆರಳುವ ದಿನಾಂಕದಿಂದ |
| 03 | ಡಾ.ಅರ್ತೋಬ ನಾಯಕ ಹಿರಿಯ ಪ್ರಾಧ್ಯಾಪಕರು | ರಸಾಯನಶಾಸ್ತ್ರ | 07-10-2026 |
| 04 | ಡಾ.ನಾಗರಾಜ, ಹಿರಿಯ ಪ್ರಾಧ್ಯಾಪಕರು | ಪ್ರಾಣಿಶಾಸ್ತ್ರ | 17-09-2026 |
| 05 | ಡಾ.ರಾಜಾನಾಯಕ ಹಿರಿಯ ಪ್ರಾಧ್ಯಾಪಕರು | ಸಸ್ಯಶಾಸ್ತ್ರ | 01-10-2026 |
| 06 | ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದ ಅಧ್ಯಕ್ಷರಾದ ಡಾ.ಚಂದ್ರಶೇಖರ್, ಪ್ರಾಧ್ಯಾಪಕರು, ಸಮಾಜಶಾಸ್ತ್ರ ಇವರ ಅವಧಿಯು ದಿನಾಂಕ:05-10-2026ರಂದು ಮುಕ್ತಾಯಗೊಳ್ಳಲಿದ್ದು, ಸಮಾಜಕಾರ್ಯ ವಿಭಾಗದಲ್ಲಿ ಯಾರೂ ಖಾಯಂ ಅಧ್ಯಾಪಕರು ಇಲ್ಲದಿರುವ ಹಿನ್ನೆಲೆಯಲ್ಲಿ ಸದರಿ ವಿಭಾಗಕ್ಕೆ ಸ್ಕೂಲ್ ಆಫ್ ಸೋಷಿಯಲ್ ಸೈನ್ಸ್‌ನಿಂದ ಒಬ್ಬರನ್ನು ಅಧ್ಯಕ್ಷರಾಗಿ ನೇಮಕ ಮಾಡಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು. | | |

**2026-ಸಿಂ-3.28 (ಡಿ):** ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯವರ ವೇತನ ಹೆಚ್ಚಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಂ.ಬಿ.ಬಿ.ಎಸ್. ವಿದ್ಯಾರ್ಹತೆ ಹೊಂದಿರುವ ವೈದ್ಯಾಧಿಕಾರಿಗಳಾದ ಡಾ.ಸಾಗರ್, ಯು. ರವರ ಮಾಸಿಕ ವೇತನವನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ರೂ.60,000/- ಗಳಿಂದ ರೂ.70,000/- ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2026-ಸಿಂ-3.29:** ದಿನಾಂಕ:31-01-2026 ರಂದು ನಡೆದ ತಾಂತ್ರಿಕ ಮತ್ತು ಫೈನಾನ್ಷಿಯಲ್ ಬಿಡ್ ತೆರೆಯುವ/ ಪರಿಶೀಲನಾ ಸಮಿತಿ ಸಭೆ ನಡಾವಳಿ ಅನುಮೋದನೆ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು, ಕಛೇರಿಗಳಿಗೆ ವಿಶ್ವವಿದ್ಯಾಲಯದ ಆಂತರಿಕ ಅನುದಾನದಲ್ಲಿ ಮತ್ತು ಸಹ್ಯಾದ್ರಿ ಕಲಾ ಕಾಲೇಜು ಹಾಗೂ ಸಹ್ಯಾದ್ರಿ ವಿಜ್ಞಾನ ಕಾಲೇಜುಗಳಿಗೆ ರೂಸಾ ಅನುದಾನದಲ್ಲಿ Multifunctional Laser Mono Printer, Desktop Computer Systems, Smart Boards & other related accessories including digital podium, LED Projector, Screen & other related accessories, UPS with Tabular Batteries, Laptop ಮುಂತಾದ ಪರಿಕರಗಳನ್ನು ಖರೀದಿಸುವ ಸಲುವಾಗಿ ವಿಶ್ವವಿದ್ಯಾಲಯ ನಡೆಸಿದ ಇ-ಟೆಂಡರ್ ಪ್ರಕ್ರಿಯೆಯನ್ನು ಸಭೆಯು ಅನುಮೋದಿಸಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

## ಪರೀಕ್ಷಾ ವಿಭಾಗ

**2026–ಸಿಂ–3.30:** ತಾತ್ಕಾಲಿಕ ದಿನಗೂಲಿ ನೌಕರರುಗಳ ಸೇವೆಯನ್ನು ಮಾರ್ಚ್–2026ರ ಅಂತ್ಯದರೆಗೂ ಪಡೆದು ನಂತರ ಅವಶ್ಯಕತೆ ಇದ್ದಲ್ಲಿ ಮಾತ್ರ ಅಗತ್ಯ ಪ್ರಮಾಣದಲ್ಲಿ ಪಡೆಯುವ ಕುರಿತು.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ವಿಶ್ವವಿದ್ಯಾಲಯದ ವಿವಿಧ ಸ್ನಾತಕ/ ಸ್ನಾತಕೋತ್ತರ ಮತ್ತು ವೃತ್ತಿಪರ ಕೋರ್ಸ್‌ಗಳ ಪರೀಕ್ಷಾ ಕಾರ್ಯಗಳಿಂದ ಪ್ರಾರಂಭಿಸಿ ಫಲಿತಾಂಶ ಪ್ರಕಟಣೆಯವರೆಗಿನ ಕಾರ್ಯಗಳನ್ನು ನಿರ್ವಹಿಸಲು ಟೆಂಡರ್ ಮೂಲಕ ಸಂಸ್ಥೆಯವರಿಗೆ ನೀಡಲಾಗಿತ್ತು. ಸದರಿ ಸಂಸ್ಥೆಯ ಸೇವೆಯನ್ನು (ನಾನ್ ಎನ್.ಇ.ಪಿ. ಹೊರತುಪಡಿಸಿ) ಸ್ಥಗಿತಗೊಳಿಸಿದ ನಂತರ ಎಲ್ಲಾ ಪದವಿಗಳ (ಎಸ್.ಇ.ಪಿ. ಮತ್ತು ಎನ್.ಇ.ಪಿ.) ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ಪರೀಕ್ಷೆ ನಡೆದ ದಿನಾಂಕವಾರು ಮತ್ತು ಪತ್ರಿಕೆವಾರು ಜೋಡಿಸುವುದು, ಶಫಲಿಂಗ್, ಕೋಡಿಂಗ್, ಡೀಕೋಡಿಂಗ್ ಮುಂತಾದ ಕೆಲಸಗಳನ್ನು ತಾತ್ಕಾಲಿಕ ದಿನಗೂಲಿ ಸಿಬ್ಬಂದಿಗಳಿಂದ ನಿರ್ವಹಿಸಿಕೊಂಡು ಬರುತ್ತಿದ್ದು, ಸದರಿ ದಿನಗೂಲಿ ಕೆಲಸಗಾರರಿಗೆ ಸಿಂಡಿಕೇಟ್ ಸಭೆಯ ನಿರ್ಣಯದಂತೆ ದಿನವೊಂದಕ್ಕೆ ರೂ.500/–ಗಳ ವೇತನ ಪಾವತಿಸಲಾಗುತ್ತಿದೆ. ಆದರೆ, ದಿನಗೂಲಿ ನೌಕರರಿಗೆ ರೂ.500/–ಗಳಂತೆ ಪಾವತಿಸುತ್ತಿರುವುದು ಸರ್ಕಾರದ ಏಕರೂಪ ಭತ್ಯೆ/ ಸಂಭಾವನೆ ಆದೇಶಕ್ಕೆ ವಿರುದ್ಧವಾಗಿರುವುದಾಗಿ ಸರ್ಕಾರಿ ಲೆಕ್ಕಪರಿಶೋಧಕರು ಆಕ್ಷೇಪಿಸಿರುತ್ತಾರೆ.

ಆದರೆ, ದಿನಾಂಕ:16–10–2023ರ ಏಕರೂಪದ ಭತ್ಯೆ/ಸಂಭಾವನೆ ಆದೇಶದಲ್ಲಿ ಪ್ರತಿ ಉತ್ತರ ಪತ್ರಿಕೆಯ ಕೋಡಿಂಗ್‌ಗೆ 0.50ಪೈಸೆಗಳು ಮತ್ತು ಡೀಕೋಡಿಂಗ್‌ಗೆ 0.50ಪೈಸೆಗಳನ್ನು ನಿಗದಿಪಡಿಸಲಾಗಿದೆ. ಈ ಸಂಬಂಧ U.U.C.M.S. ತಂತ್ರಾಂಶದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳ ಪರೀಕ್ಷೆ ನಂತರದಲ್ಲಿ ಕೋಡೀಂಗ್ ಮತ್ತು ಡೀಕೋಡಿಂಗ್ ಒಳಗೊಂಡಂತೆ ಫಲಿತಾಂಶ ಪ್ರಕಟಣೆಯವರೆಗೂ ಎಲ್ಲವನ್ನೂ ಪರೀಕ್ಷಾ ವಿಭಾಗದ ಸಿಬ್ಬಂದಿಗಳೇ ನಿರ್ವಹಿಸಬೇಕಾಗಿದ್ದು, ಪರೀಕ್ಷಾ ವಿಭಾಗದಲ್ಲಿ ಸಿಬ್ಬಂದಿಗಳ ಕೊರತೆ ಇರುವುದರಿಂದ ಸದರಿ ದಿನಗೂಲಿ ನೌಕರರ ಸೇವೆಯನ್ನು ಬಳಸಿಕೊಳ್ಳಲಾಗಿದೆ. ಆದರೆ, ಸದರಿ ದಿನಗೂಲಿ ನೌಕರರಿಗೆ ವರ್ಷವಿಡೀ ಕೆಲಸ ಇರುವುದಿಲ್ಲವಾದ್ದರಿಂದ, ಅವರ ಸೇವೆಯನ್ನು ಮಾರ್ಚ್–2026ರ ಮಾಹೆಯ ಅಂತ್ಯದವರೆಗೂ ಪಡೆದುಕೊಂಡು, ನಂತರ ಅವಶ್ಯಕತೆ ಇದ್ದ ಸಮಯದಲ್ಲಿ ಮಾತ್ರ ಮತ್ತೆ ಸೇವೆ ಪಡೆಯುವ ಕುರಿತಾಗಿ ಸಭೆಯು ಅನುಮೋದನೆಗಾಗಿ ಮಂಡಿಸಿದೆ ಎಂದರು.

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಅವರಿಗೆ ಬ್ರೇಕ್ ಕೊಡುವುದರ ಬದಲು ಬೇರೆ ಕೆಲಸ ನೀಡಿ, ಇಲ್ಲವಾದಲ್ಲಿ ಅವರ ಜೀವನ ನಿರ್ವಹಣೆ ಕಷ್ಟವಾಗುತ್ತದೆ ಎಂದರು. ಎಲ್ಲಾ ಸದಸ್ಯರೂ ಇದಕ್ಕೆ ಧ್ವನಿಗೂಡಿಸಿದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಉಳಿದ ಅವಧಿಯಲ್ಲಿ ಪರೀಕ್ಷಾ ವಿಭಾಗದಲ್ಲಿ ಅವರಿಗೆ ಏನೂ ಕೆಲಸ ಇರುವುದಿಲ್ಲ. ಸುಮ್ಮನೇ ವೇತನ ನೀಡಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ದೂರ ಶಿಕ್ಷಣ ಕೋರ್ಸ್‌ಗಳು ಆರಂಭವಾದಲ್ಲಿ ಇವರನ್ನು ಪರಿಗಣಿಸಬಹುದು ಎಂದರು.

**ನಿರ್ಣಯ:** ಚರ್ಚೆಯ ನಂತರ, ಪರೀಕ್ಷಾ ವಿಭಾಗದಲ್ಲಿ ಎಲ್ಲಾ ಪದವಿ ಪರೀಕ್ಷೆಗಳ (ಎಸ್.ಇ.ಪಿ. ಮತ್ತು ಎನ್.ಇ.ಪಿ.) ಉತ್ತರಪತ್ರಿಕೆಗಳ ಬಂಡಲ್‌ಗಳನ್ನು ಜೋಡಿಸುವುದು, ಶಫಲಿಂಗ್, ಕೋಡಿಂಗ್, ಡೀಕೋಡಿಂಗ್ ಮುಂತಾದ ಕೆಲಸಗಳನ್ನು ನಿರ್ವಹಿಸಲು ತಾತ್ಕಾಲಿಕ ದಿನಗೂಲಿ ಸಿಬ್ಬಂದಿಗಳನ್ನು ಕೆಲಸವಿರುವ ಸಮಯದಲ್ಲಿ ಮಾತ್ರ ನೇಮಕ ಮಾಡಿಕೊಳ್ಳಲು ಅನುಮತಿಸಲಾಯಿತು.

## ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗ

**2026–ಸಿಂ–3.31:** 2026–27ನೇ ಶೈಕ್ಷಣಿಕ ಸಾಲಿನ 03 ಕಾಲೇಜುಗಳ ಸಂಯೋಜನಾ ಅನುಮೋದನೆ ಕುರಿತು.

**ನಿರ್ಣಯ:** ಇದೇ ವಿಷಯದ ಕುರಿತು, ವಿಷಯ ಸಂಖ್ಯೆ:**2026–ಸಿಂ–3.03:**ದಿನಾಂಕ:18–02–2026 ರಂದು ನಡೆದ ವಿಶೇಷ ಸಿಂಡಿಕೇಟ್ (ಆನ್‌ಲೈನ್) ಸಭೆಯ ನಡಾವಳಿಗಳ ದೃಢೀಕರಣದಲ್ಲಿ ಚರ್ಚೆ ಮತ್ತು ನಿರ್ಣಯವಾಗಿರುತ್ತದೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

**2026–ಸಿಂ–3.31(ಎ):** 2026–27ನೇ ಶೈಕ್ಷಣಿಕ ಸಾಲಿನ ಬಿ.ಬಿ.ಎ. ಕೋರ್ಸ್‌ನ್ನು ರದ್ದುಗೊಳಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ, ಪ್ರಾಂಶುಪಾಲರು, **ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಚಿಕ್ಕಮಗಳೂರು.** ಇವರು ಸಲ್ಲಿಸಿದ್ದ ಮನವಿಯ ಮೇರೆಗೆ 2026–27ನೇ ಸಾಲಿನಿಂದ ಸದರಿ ಕಾಲೇಜಿನಲ್ಲಿರುವ ಬಿ.ಬಿ.ಎ. ಪದವಿಯನ್ನು ಶಾಶ್ವತವಾಗಿ ರದ್ದುಪಡಿಸುವ ಬಗ್ಗೆ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2026–ಸಿಂ–3.32:** **ಸದಸ್ಯರು ಮಂಡಿಸಿರುವ ಪ್ರಸ್ತಾವನೆಗಳು**

1) **ಶಿವಕುಮಾರ್ ಎಂ.**
2) **ಡಾ. ಪ್ರತಿಭಾ ಕೆ.ಆರ್.**

**2026–ಸಿಂ–3.32(1):** **ಶಿವಕುಮಾರ್ ಎಂ.:** ತಾವು ಮಂಡಿಸಿದ 1 ಮತ್ತು 2ನೇ ವಿಷಯಗಳ ಬಗ್ಗೆ ವಿಶ್ವವಿದ್ಯಾಲಯ ನೀಡಿರುವ ಮಾಹಿತಿಯನ್ನು ಪರಿಶೀಲಿಸಬೇಕಾಗಿರುವುದರಿಂದ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸುವಂತೆ ಕೋರಿದರು.

**3ನೇ ವಿಷಯ:** ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಖಾಯಂ ಆಗಿ ಎಂ.ಬಿ.ಬಿ.ಎಸ್. ವೈದ್ಯರನ್ನು ನೇಮಿಸುವ ಕುರಿತು.

ಶ್ರೀ ಶಿವಕುಮಾರ್‌ರವರು ಮಾತನಾಡಿ, ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿಗಳು, ಸಂಶೋಧಕರು, ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿಗಳು, ಅತಿಥಿ ಉಪನ್ಯಾಸಕರು, ಹೊರಗುತ್ತಿಗೆ ಸಿಬ್ಬಂದಿಗಳು ಸೇರಿದಂತೆ ಸಾವಿರಾರು ಜನಸಂಖ್ಯೆ ಇದ್ದು, ಆರೋಗ್ಯ ಕೇಂದ್ರ ಕೂಡ ಉತ್ತಮವಾಗಿದೆ. ಆದುದರಿಂದ ಆರೋಗ್ಯ ಕೇಂದ್ರಕ್ಕೆ ಎಂ.ಬಿ.ಬಿ.ಎಸ್. ವಿದ್ಯಾರ್ಹತೆಯುಳ್ಳ ಒಬ್ಬ ಖಾಯಂ ವೈದ್ಯರನ್ನು ನೇಮಿಸಲು ಕೋರಿದರು.

ಕುಲಸಚಿವರು ಮಾಹಿತಿ ನೀಡುತ್ತಾ, ವಿಶ್ವವಿದ್ಯಾಲಯಕ್ಕೆ ಒಂದು ವೈದ್ಯರ ಹುದ್ದೆ ಮಂಜೂರಾಗಿದ್ದು, ಈ ಹಿಂದೆ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದಲ್ಲಿ ಖಾಯಂ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಡಾ.ಟಿ.ಆರ್. ಮಂಜುನಾಥ ಎಂಬುವವರು ಸದರಿ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸಿದ ನಂತರ ಖಾಯಂ ನೇಮಕಾತಿಯಾಗಿಲ್ಲ. ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಯನ್ನು ನಿಯೋಜಿಸುವಂತೆ ಹಲವು ಬಾರಿ ಸರ್ಕಾರಕ್ಕೆ ಕೋರಲಾಗಿದ್ದು, ಇದುವರೆಗೂ ನಿಯೋಜಿಸಿರುವುದಿಲ್ಲ. ಆದ್ದರಿಂದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮತ್ತು ನೌಕರರ ಹಿತದೃಷ್ಟಿಯಿಂದ 2007 ರಿಂದ ಸಂಚಿತ ವೇತನ ಆಧಾರದ ಮೇಲೆ ವೈದ್ಯಾಧಿಕಾರಿಗಳನ್ನು ನೇಮಕ ಮಾಡಲಾಗುತ್ತಿದೆ ಎಂದರು.

ಚರ್ಚೆಯ ನಂತರ ವಿಶ್ವವಿದ್ಯಾಲಯ ಆರೋಗ್ಯ ಕೇಂದ್ರಕ್ಕೆ ಖಾಯಂ ವೈದಾಧಿಕಾರಿಗಳ ಅಗತ್ಯ ಇರುವುದರಿಂದ ಈಗಾಗಲೇ ಮಂಜೂರಾಗಿರುವ ಹುದ್ದೆಗೆ ನೇಮಕ ಮಾಡಿಕೊಳ್ಳಲು ಅನುಮತಿ ಕೋರಿ ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ಣಯಿಸಲಾಯಿತು.

**2026–ಸಿಂ–3.32(2):** **ಪ್ರತಿಭಾ ಕೆ.ಆರ್.**

**2026–ಸಿಂ–3.32(2.1):** ಸ್ನಾತಕೋತ್ತರ/ಎಂ.ಫಿಲ್/ಪಿ.ಹೆಚ್.ಡಿ ಪ್ರಮಾಣ ಪತ್ರಗಳ ನೈಜತೆ ಕುರಿತು ಪ್ರಮಾಣ ಪತ್ರ ಪಡೆಯಲು ಪ್ರತಿಯೊಬ್ಬ ಅಭ್ಯರ್ಥಿಯು ಪ್ರತ್ಯೇಕವಾಗಿ ಶುಲ್ಕ ಪಾವತಿಸುತ್ತಿದ್ದರೂ ಕೂಡ ಪ್ರಮಾಣ ಪತ್ರವನ್ನು ಒಂದೇ ಆದೇಶದಲ್ಲಿ ಎಲ್ಲಾ ಅಭ್ಯರ್ಥಿಗಳ ಹೆಸರು ಸೇರಿಕೊಡಲಾಗುತ್ತಿದೆ. ಇದನ್ನು ಪ್ರತ್ಯೇಕವಾಗಿ ನೀಡಲು ಕ್ರಮವಹಿಸಲು ಕೋರಿದೆ.

ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ನೈಜತೆ ಪ್ರಮಾಣ ಪತ್ರಕ್ಕಾಗಿ ನಿಗದಿತ ಶುಲ್ಕದೊಂದಿಗೆ ಒಂದೇ ಕಾಲೇಜಿನಿಂದ ಹಲವಾರು ಅಭ್ಯರ್ಥಿಗಳು ನೈಜತೆ ಪ್ರಮಾಣ ಪತ್ರವನ್ನು ಕೋರಿ ಪ್ರಾಂಶುಪಾಲರ ಮೂಲಕವೇ ಅರ್ಜಿ ಸಲ್ಲಿಸುತ್ತಿರುವುದರಿಂದ ಆಯಾ ಕಾಲೇಜಿನ ಎಲ್ಲಾ ಅಭ್ಯರ್ಥಿಗಳಿಗೆ ನೈಜತೆ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ, ಕ್ರೋಢೀಕರಿಸಿ ಒಂದೇ ಮುಖ ಪತ್ರದಲ್ಲಿ ನೈಜತೆ ಪ್ರಮಾಣ ಪತ್ರಗಳ ವಿವರಗಳೊಂದಿಗೆ ಕಳುಹಿಸಿಕೊಡಲಾಗುತ್ತದೆ. ಒಂದು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

ಕಾಲೇಜಿನಿಂದ ಒಬ್ಬ ಅಭ್ಯರ್ಥಿಯ ನೈಜತೆ ಪರಿಶೀಲನೆಗಾಗಿ ಅರ್ಜಿ ಕಳುಹಿಸಿಕೊಟ್ಟಲ್ಲಿ ಒಬ್ಬ ಅಭ್ಯರ್ಥಿಯ ದಾಖಲಾತಿಗಳನು ಪರಿಶೀಲಿಸಿ ಸಂಬಂಧಪಟ್ಟ ಕಾಲೇಜುಗಳಿಗೆ ಕಳುಹಿಸಿಕೊಡಲಾಗುತ್ತಿದೆ ಎಂಬ ಮಾಹಿತಿಯನ್ನು ನೀಡಲಾಯಿತು.

**2026–ಸಿಂ–3.32(2.2):** ವಿಶ್ವವಿದ್ಯಾಲಯವು ಪ್ರತಿನಿದಿಸುವ ಕ್ರೀಡಾಪಟುಗಳು ದಿನಭತ್ಯೆ (ಡಿ.ಎ) ಕೇವಲ 300/– ಇದೆ ಅವರಿಗೆ ಕನಿಷ್ಠ ರೂ.500/– ರಿಂದ 700/– ಗಳಿಗೆ ಹೆಚ್ಚಿಸಲು ಕ್ರಮವಹಿಸಲು ಕೋರಿದೆ.

ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುವ ಕ್ರೀಡಾಪಟುಗಳಿಗೆ ದಿನಭತ್ಯೆ (ಡಿ.ಎ) ರೂ.300/– ರಿಂದ ರೂ.500/–ಗಳಿಗೆ ದಿನಭತ್ಯೆ (ಡಿ.ಎ) ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ಒದಗಿಸಲಾಯಿತು.

**2026–ಸಿಂ–3.32(2.3):** ಅತಿಥಿ ಉಪನ್ಯಾಸಕರ ನೇಮಕಾತಿ ಕಾಲೇಜು ಪ್ರಾರಂಭವಾದ ಒಂದು ತಿಂಗಳ ನಂತರ ಆಗಿದ್ದು, ಅನೇಕ ವಿಷಯಗಳಲ್ಲಿ ಪಾಠ ಪ್ರವಚನ ಆಗಿರುವುದಿಲ್ಲ. ಆದ್ದರಿಂದ ಕನಿಷ್ಠ 15 ದಿನಗಳ ಅವಧಿಗೆ Last working day ಅನ್ನು ಮುಂದೂಡಲು ಕೋರಿದೆ.

ಸ್ನಾತಕ ಪದವಿಯ ಶೈಕ್ಷಣಿಕ ವೇಳಾಪಟ್ಟಿಯನ್ನು 15 ದಿನಗಳ ಅವಧಿಗೆ ಮುಂದೂಡುವುದರಿಂದ ಪರೀಕ್ಷೆಗಳು ಮುಂದಕ್ಕೆ ಹೋಗುತ್ತವೆ, ಪದವಿ ಫಲಿತಾಂಶ ವಿಳಂಬವಾಗಿ ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ತಡವಾಗುವುದು ಮತ್ತು ಬೇರೆ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಇತರೆ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಾತಿ ಪಡೆದು ನಮ್ಮ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಅಲ್ಲದೆ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿ ಪ್ರವೇಶಕ್ಕೆ ಅಧಿಸೂಚನೆ ಹೊರಡಿಸುವುದು ವಿಳಂಬವಾಗುವುದರಿಂದ ಸ್ನಾತಕ ಪದವಿ ತರಗತಿಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗುತ್ತದೆ. ಇದು ಮಾತ್ರವಲ್ಲದೇ, ನಮ್ಮ ಪರೀಕ್ಷೆ ವಿಳಂಬದಿಂದಾಗಿ ಫಲತಾಂಶ ಕೂಡ ವಿಳಂಬವಾದಲ್ಲಿ ನಮ್ಮ ವಿದ್ಯಾರ್ಥಿಗಳು ಬೇರೆ ಸಂಸ್ಥೆಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಮತ್ತು ಉದ್ಯೋಗ ಪಡೆಯಲು ತೊಂದರೆಯಾಗುತ್ತದೆ. ಸದರಿ ಸ್ನಾತಕ ಪದವಿಯ ಶೈಕ್ಷಣಿಕ ವೇಳಾಪಟ್ಟಿಯನ್ನು ಎಲ್ಲಾ ನಿಕಾಯದ ಡೀನರುಗಳು ಮತ್ತು ಮಾನ್ಯ ಕುಲಪತಿಗಳು ಹಾಗೂ ಮಾನ್ಯ ಕುಲಸಚಿವರು ಸಭೆ ನಡೆಸಿ ನಿರ್ಣಯ ಕೈಗೊಂಡಿರುವ ಹಿನ್ನೆಲೆಯಲ್ಲಿ ಶೈಕ್ಷಣಿಕ ವೇಳಾಪಟ್ಟಿಯನ್ನು 15 ದಿನಗಳ ಅವಧಿಗೆ ಮುಂದೂಡುವುದು ಕಷ್ಟವಾಗುತ್ತದೆ ಎಂಬ ಮಾಹಿತಿಯನ್ನು ಸದಸ್ಯರಿಗೆ ನೀಡಲಾಯಿತು.

**2026–ಸಿಂ–3.33:** **ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

**ಯಾವುದೂ ಇಲ್ಲ**

**2026–ಸಿಂ–3.34:** **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2026–ಸಿಂ–3.34(1):** **ಶ್ರೀ ಕೆ.ಪಿ. ಶ್ರೀಪಾಲ್: ಡಾ.ಮುದುಕಪ್ಪ ಇವರ ವಿರುದ್ದ ಆರೋಪಗಳು ಬಂದಿರುವ ಕುರಿತು.**

ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಸಹ್ಯಾದ್ರಿ ಕಲಾ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಮುದುಕಪ್ಪರವರು ಸ್ನಾತಕೋತ್ತರ ವಿದ್ಯಾರ್ಥಿನಿಯೊಂದಿಗೆ ಅಸಭ್ಯವಾಗಿ ನಡೆದುಕೊಂಡಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿ ಪ್ರಸಾರವಾಗಿದೆ. ವಿದ್ಯಾರ್ಥಿಗಳು ಕೂಡ ಪ್ರತಿಭಟಿಸಿದ್ದಾರೆ. ಆದರೆ, ವಿದ್ಯಾರ್ಥಿಗಳಿಗೆ ಆಮಿಷವೊಡ್ಡಿ ಪ್ರತಿಭಟನೆ ಹತ್ತಿಕ್ಕುವ ಕೆಲಸ ಕೂಡ ಕಾಲೇಜಿನಲ್ಲಿ ಆಗಿದೆ. ವಿದ್ಯಾರ್ಥಿನಿಯೊಂದಿಗೆ ವಾಟ್ಸಾಪ್‌ನಲ್ಲಿ ಚಾಟ್ ಮಾಡಿರುವ ಬಗ್ಗೆ ಸುಮಾರು 30 ಪುಟಗಳಷ್ಟು ಮುದ್ರಿತ ಸಾಮಗ್ರಿ ಇದೆ. ಇದು ಲೈಂಗಿಕ ದೌರ್ಜನ್ಯದ ಪ್ರಕರಣವಾಗಿದ್ದಲ್ಲಿ ಅವರ ಮೇಲೆ ಕ್ರಮ ಆಗಬೇಕು. ಅವರ ವಿರುದ್ಧ ಕ್ರಮ ಕೈಗೊಂಡು ತನಿಖೆ ನಡೆಸಿ. ಅವರು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಶಿಕ್ಷೆ ವಿಧಿಸಿ ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಅವರು ಮಾಡಿರುವುದು ತಪ್ಪಾಗಿದ್ದರೆ ಅವರ ವಿರುದ್ದ ಕ್ರಮ ಕೈಗೊಳ್ಳಬೇಕು. ಇಂತಹ ಪ್ರಕರಣಗಳಲ್ಲಿ ವಿಶ್ವವಿದ್ಯಾಲಯವು ಕ್ರಮ ಕೈಗೊಳ್ಳುತ್ತಿಲ್ಲವೆಂದು ಹೊರಗೆ ಮಾತನಾಡಿಕೊಳ್ಳುತ್ತಿದ್ದಾರೆ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರ್‌ರವರು ಮಾತನಾಡಿ, ಇದು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

ಗಂಭೀರ ಪ್ರಕರಣವಾಗಿದ್ದು, ಅವರನ್ನು ಅಮಾನತ್ತುಗೊಳಿಸಿ ತನಿಖೆ ನಡೆಸಿ ಎಂದರು. ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ, ಅವರ ವಿರುದ್ಧ ಎಫ್.ಐ.ಆರ್. ಆಗಿದೆಯೇ? ಆ ವಿದ್ಯಾರ್ಥಿನಿ ದೂರು ನೀಡಿದ್ದಾರೆಯೇ? ಲೈಂಗಿಕ ದೌರ್ಜನ್ಯ ಪರಿಹರಿಸುವ ಸಮಿತಿಯಿಂದ ತನಿಖೆ ಆಗಿದೆಯೇ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ವಿದ್ಯಾರ್ಥಿನಿಯು ನನ್ನೊಂದಿಗೆ ದೂರವಾಣಿಯಲ್ಲಿ ಮಾತನಾಡಿ, ನನ್ನ ಅವಹೇಳನ ಆಗುತ್ತಿದೆ. ಕೆಲವರು ಬಂದು ಮುಷ್ಕರ ನಡೆಸುತ್ತಾರೆ. ಮಾಧ್ಯಮದವರು ಹಲವಾರು ಪ್ರಶ್ನೆಗಳನ್ನು ಕೇಳುತ್ತಾರೆ. ಇದರಿಂದ ನನಗೆ ಮಾನಸಿಕ ಹಿಂಸೆಯಾಗುತ್ತಿದೆ. ನಾನು ದೂರನ್ನು ವಾಪಾಸ್ಸು ಪಡೆಯುತ್ತೇನೆ ಎನ್ನುತ್ತಿದ್ದಾರೆ ಎಂದರು.

ಕುಲಸಚಿವರು ಮಾತನಾಡಿ, ಡಾ. ಮುದುಕಪ್ಪ ವಿರುದ್ಧ ವಿದ್ಯಾರ್ಥಿನಿಯು ಸಹ್ಯಾದ್ರಿ ಕಲಾ ಕಾಲೇಜಿನ ಪ್ರಾಂಶುಪಾಲರಿಗೆ ದೂರು ನೀಡಿದ್ದಾರೆ. ಅವರು ಕಾಲೇಜು ಹಂತದಲ್ಲಿ ಸಮಿತಿ ರಚಿಸಿ ವಿಚಾರಣೆ ನಡೆಸಿದ್ದಾರೆ. ನಂತರ ವಿಶ್ವವಿದ್ಯಾಲಯಕ್ಕೆ ಎಲ್ಲಾ ದಾಖಲೆಗಳೊಂದಿಗೆ ವರದಿ ಸಲ್ಲಿಸಿದ್ದು, ನಾವು ಮಾನ್ಯ ಕುಲಪತಿಯವರ ಅನುಮೋದನೆ ಪಡೆದುಕೊಂಡು ಅವರಿಗೆ ಮೂರು ದಿನಗಳಲ್ಲಿ ಉತ್ತರಿಸುವಂತೆ ನೋಟೀಸ್ ನೀಡಲಾಗಿದೆ. ಅವರಿಂದ ಮಾಹಿತಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಅವರ ವಿರುದ್ಧ ದೂರುಗಳು ಬಂದಾಗ ಅದರ ಕುರಿತಾಗಿ ಮಾಹಿತಿ ನೀಡಲು ಅವರಿಗೆ ಒಂದು ಅವಕಾಶ ನೀಡಲೇಬೇಕು ಎಂದರು.

**2026–ಸಿಂ–3.34(2): ಶ್ರೀ ಮುಸಾವೀರ್ ಬಾಷಾ: ಇಂಜಿನಿಯರಿಂಗ್ ವಿಭಾಗದ ಬಿಲ್ಲುಗಳ ಪಾವತಿ ಕುರಿತು**

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಈ ಹಿಂದೆ ನ್ಯಾಕ್ ಅವಧಿಯಲ್ಲಿ ತುರ್ತು ಅಗತ್ಯವಿದ್ದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿದ ಸಂದರ್ಭದಲ್ಲಿ ಬಿಲ್ಲುಗಳ ಪಾವತಿಗೆ ಮುನ್ನ ತಜ್ಞರು ಮತ್ತು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಒಂದು ಸಮಿತಿಯಿಂದ Third Party Inspection ಮಾಡಿಸಿ ವರದಿ ಪಡೆಯಬೇಕೆಂದು ನಿರ್ಣಯಿಸಲಾಗಿತ್ತು. ಆದರೆ, ಸಮಿತಿಯನ್ನು ರಚಿಸಿದ ಆದೇಶವೇ ಬರಲಿಲ್ಲ. ಸಮಿತಿಯನ್ನು ರಚಿಸಿದ್ದರೆ ಆಗಿರುವ ಕೆಲಸ ಕಾರ್ಯಗಳನ್ನು ಪರಿಶೀಲಿಸುತ್ತಿತ್ತು. ಆದರೆ, ಸಮಿತಿಯನ್ನು ರಚಿಸದೇ, ಒಂದೂ Inspection ನಡೆಸದೇ ಸುಮಾರು ರೂ.2.00ಕೋಟಿಗಳಿಗೂ ಅಧಿಕ ಮೌಲ್ಯದ ಬಿಲ್ಲುಗಳನ್ನು ಪಾವತಿಸಲಾಗಿದೆ. ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಕೂಡ Third Party Inspection ಸಮಿತಿ ಇರುತ್ತದೆ ಎಂದರು. ಶ್ರೀ ಶಾಂತಕುಮಾರ್‌ರವರು ಮಾತನಾಡಿ, ನ್ಯಾಕ್ ಭೇಟಿ ಸಂದರ್ಭದಲ್ಲಿ ರೂ.5.00ಲಕ್ಷಗಳಿಗಿಂತ ಕಡಿಮೆ ಮೌಲ್ಯದ ಹಲವಾರು ಕಾಮಗಾರಿ ಬಿಲ್ಲುಗಳನ್ನು ಪಾವತಿಸಲಾಗಿದೆ. ಅದರ ಮಾಹಿತಿಯನ್ನು ಕೂಡ ಒದಗಿಸಿಲ್ಲ ಎಂದರು.

ಚರ್ಚೆಯ ನಂತರ, ನ್ಯಾಕ್ ಭೇಟಿ ಹಿನ್ನೆಲೆಯಲ್ಲಿ ಕೈಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಾವತಿಯಾಗಿರುವ ರೂ.5.00ಲಕ್ಷಗಳಿಗಿಂತ ಕಡಿಮೆ ಮೌಲ್ಯದ ಬಿಲ್ಲುಗಳು ಹಾಗೂ ಸಿಂಡಿಕೇಟ್ ನಿರ್ಣಯದ ಪ್ರಕಾರ Third Party Inspection ನಡೆಸದೇ ಪಾವತಿಸಿರುವ ರೂ.5.00ಲಕ್ಷಗಳಿಗಿಂತ ಹೆಚ್ಚಿನ ಮೌಲ್ಯದ ಎಲ್ಲಾ ಬಿಲ್ಲುಗಳ ವಿವರಗಳನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ನಿರ್ಣಯಿಸಲಾಯಿತು.

**2026–ಸಿಂ–3.34(3): ಶ್ರೀ ಶಿವಕುಮಾರ್ ಎಂ.: ಸಿಂಡಿಕೇಟ್‌ಗೆ ಟಿಪ್ಪಣಿಗಳನ್ನು ವಿವರವಾಗಿ ಮಂಡಿಸದಿರುವ ಬಗ್ಗೆ.**

ಶ್ರೀ ಶಿವಕುಮಾರ್‌ರವರು ಮಾತನಾಡಿ, ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಂದ ಸಿಂಡಿಕೇಟ್ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸುವ ಟಿಪ್ಪಣಿಗಳು ಬಹಳ ಸಂಕ್ಷಿಪ್ತವಾಗಿದ್ದು, ವಿವರಗಳೇ ಇರುವುದಿಲ್ಲ. ಇದರಿಂದ ನಾವು ವಿಷಯವನ್ನು ಅಧ್ಯಯನ ಮಾಡಿ, ಅರ್ಥೈಸಿಕೊಂಡು ಚರ್ಚೆ ನಡೆಸಿ, ನಿರ್ಣಯ ಕೈಗೊಳ್ಳಲು ಕಷ್ಟವಾಗುತ್ತದೆ. ಇದು ಸರಿಯಾದ ಕ್ರಮವಲ್ಲ. ಟಿಪ್ಪಣಿಗಳನ್ನು ವಿವರವಾಗಿ ಮಂಡಿಸಬೇಕು. ಟೆಂಡರ್‌ಗಳನ್ನು ಅನುಮೋದನೆಗೆ ಇಡುವಾಗ ಸಂಬಂಧಪಟ್ಟ ಟೆಂಡರ್ ಪರಿಶೀಲನಾ ಸಮಿತಿಯ ನಡಾವಳಿಗಳನ್ನು ಕೂಡ ಲಗತ್ತಿಸಬೇಕು ಎಂದರು.

ಕುಲಸಚಿವರು ಮಾತನಾಡಿ, ಸದಸ್ಯರು ಉತ್ತಮ ಸಲಹೆ ನೀಡಿದ್ದು, ಈ ಬಗ್ಗೆ ಎಲ್ಲಾ ವಿಭಾಗಗಳಿಗೆ ತಿಳುವಳಿಕೆ ನೀಡಲಾಗುವುದು ಎಂದರು.

**2026–ಸಿಂ–3.34(4ಎ):** **ಶ್ರೀಮತಿ ಸಾಕಮ್ಮ:** ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಸಮಸ್ಯೆಗಳ ಕುರಿತು.

ಶ್ರೀಮತಿ ಸಾಕಮ್ಮರವರು ಮಾತನಾಡಿ, ವಿಶ್ವವಿದ್ಯಾಲಯದ ಘಟಕ ಕಾಲೇಜಾಗಿರುವ ಶಿವಮೊಗ್ಗದ ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ಪುರುಷ ಮತ್ತು ಮಹಿಳಾ ಶೌಚಾಲಯಗಳು ಸರಿಯಾಗಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗುತ್ತಿದೆ. ಪ್ರತಿಯೊಂದು ತರಗತಿಯಲ್ಲಿ ಸುಮಾರು 100 ವಿದ್ಯಾರ್ಥಿಗಳನ್ನು ಕೂರಿಸುತ್ತಾರೆ. ವಿದ್ಯಾರ್ಥಿಗಳು ಕುಳಿತು ಪಾಠ ಕೇಳಲು ಕಷ್ಟವಾಗುತ್ತಿದೆ. ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳೇ ಇಲ್ಲದೆ ವಿದ್ಯಾರ್ಥಿಗಳು ತೊಂದರೆ ಅನುಭವಿಸುತ್ತಿದ್ದಾರೆ ಎಂದರು. ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಮಾನಿಟರ್ ಕೊಠಡಿ ಸರಿಯಿಲ್ಲದೇ, ಅಪಾಯ ಎದುರಾಗುವಂತಿದೆ ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ನಿರ್ವಹಣೆ ಸಮರ್ಪಕವಾಗಿಲ್ಲ ಮತ್ತು ಅಲ್ಲಿ ಎಲ್ಲವೂ ಸರಿಯಿಲ್ಲ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಇದರ ಕುರಿತಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**2026–ಸಿಂ–3.34(4ಬಿ):** ಶ್ರೀಮತಿ ಸಾಕಮ್ಮ: ಅಧ್ಯಾಪಕೇತರ ನೌಕರರಿಗೆ ಬಡ್ತಿ ನೀಡುವ ಕುರಿತು.

ಶ್ರೀಮತಿ ಸಾಕಮ್ಮರವರು ಮಾತನಾಡಿ, ಈಗಾಗಲೇ ಅಧ್ಯಾಪಕೇತರ ನೌಕರರಿಗೆ ಉಪಕುಲಸಚಿವ, ಸಹಾಯಕ ಕುಲಸಚಿವದಂತಹ ಉನ್ನತ ಹುದ್ದೆಗಳಿಗೆ ಬಡ್ತಿ ನೀಡಲಾಗಿದೆ. ಆದರೆ, ಈಗ ಶಾಖಾಧಿಕಾರಿ, ಹಿರಿಯ ಸಹಾಯಕ, ಪ್ರಥಮ ದರ್ಜೆ ಸಹಾಯಕದಂತಹ ಕೆಳಹಂತದ ಸಣ್ಣಪುಟ್ಟ ಹುದ್ದೆಗಳಿಗೆ ಬಡ್ತಿ ನೀಡಿಲ್ಲ. ಕೆಲವು ನೌಕರರು ಇನ್ನು 2–3 ತಿಂಗಳಲ್ಲಿ ನಿವೃತ್ತಿ ಹೊಂದಲಿದ್ದು, ತುಂಬಾ ನೊಂದುಕೊಂಡಿದ್ದಾರೆ. ಅವರಿಗೆ ಸಕಾಲದಲ್ಲಿ ಬಡ್ತಿ ನೀಡಿ ಅನುಕೂಲ ಮಾಡಿಕೊಡಿ. ನಿಮಗೂ ಒಳ್ಳೆಯದಾಗುತ್ತದೆ ಎಂದರು. ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ, ಶ್ರೀಮತಿ ಗಾಯಿತ್ರಿ, ಎ., ರವರು ಕೆಲವೇ ತಿಂಗಳುಗಳಲ್ಲಿ ನಿವೃತ್ತಿ ಹೊಂದುತ್ತಿದ್ದು, ಅವರಿಗೂ ಬಡ್ತಿ ನೀಡಿ ಅನುಕೂಲ ಮಾಡಿಕೊಡಿ ಎಂದರು.

ಕುಲಸಚಿವರು ಮಾತನಾಡಿ, ಈಗಾಗಲೇ ಇಲಾಖಾ ಮುಂಬಡ್ತಿ ಸಭೆ ನಡೆಸಿದ್ದು, ಬಡ್ತಿಗೆ ಅರ್ಹರಿರುವವರ ಪಟ್ಟಿಗೆ ಅನುಮೋದನೆ ಪಡೆಯಲಾಗಿದ್ದು, ದಿನಾಂಕ:09–01–2026 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಕೂಡ ಸದರಿ ಪಟ್ಟಿಗೆ ಅನುಮೋದನೆ ನೀಡಲಾಗಿದೆ. ಆದುದರಿಂದ, ಇಲಾಖಾ ಮುಂಬಡ್ತಿ ಸಭೆಯಲ್ಲಿ ಶಿಫಾರಸ್ಸು ಮಾಡಿರುವ ಅರ್ಹ ನೌಕರರಿಗೆ ಶೀಘ್ರವೇ ಅರ್ಹ ನೌಕರರಿಗೆ ಬಡ್ತಿ ನೀಡಲಾಗುವುದು ಎಂದರು.

**2026–ಸಿಂ–3.34(4ಸಿ):** ಪ್ರೊ. ಚಂದ್ರಶೇಖರ್: ಸ್ಪರ್ಧಾತ್ಮಕ ಪರಿಕ್ಷಾ ತರಬೇತಿ ಕೇಂದ್ರಕ್ಕೆ ಅನುದಾನ ಒದಗಿಸುವ ಕುರಿತು.

ಪ್ರೊ. ಚಂದ್ರಶೇಖರ್‌ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಮಾನ್ಯ ಕುಲಪತಿಯವರು ಮತ್ತು ಕುಲಸಚಿವರ ಆಸಕ್ತಿಯಿಂದಾಗಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವನ್ನು ಆರಂಭಿಸಲಾಗಿದ್ದು, ಸದರಿ ಕೇಂದ್ರದಲ್ಲಿ ಯು.ಪಿ.ಎಸ್.ಸಿ., ಕೆ.ಪಿ.ಎಸ್.ಸಿ., ಬ್ಯಾಂಕಿಂಗ್, ಎನ್.ಇ.ಟಿ., ಕೆ.ಸೆಟ್. ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲಾಗುವುದು. ಕೇಂದ್ರದ ಕಾರ್ಯಚಟುವಟಿಕೆಗಳಿಗಾಗಿ ವಾರ್ಷಿಕ 18 ರಿಂದ 20 ಲಕ್ಷ ರೂಪಾಯಿಗಳ ಅನುದಾನವನ್ನು ವಿಶ್ವವಿದ್ಯಾಲಯದ ಆಯವ್ಯಯದಲ್ಲಿ ಒದಗಿಸುವಂತೆ ಕೋರಿದರು.

ಶ್ರೀ ಶಿವಕುಮಾರ್‌ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಆರಂಭಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗಿದೆ. ಇದಕ್ಕಾಗಿ ಹೊರಗಡೆ ಲಕ್ಷಾಂತರ ಹಣ ಖರ್ಚಾಗುತ್ತದೆ. ನಮ್ಮ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡಿರುವ ಹಳೆಯ ವಿದ್ಯಾರ್ಥಿಗಳ ಸಂಘವನ್ನು ಸ್ಥಾಪಿಸಿ ಅದರಲ್ಲಿರುವ ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್. ಮುಂತಾದ ಅಧಿಕಾರಿಗಳನ್ನು ಗುರುತಿಸಿ ಅವರುಗಳ ಸೇವೆ ಪಡೆದುಕೊಳ್ಳಿರಿ ಎಂದರು.

ಶ್ರೀ ಮುಸಾವೀರ್ ಬಾಷಾರವರು ಮಾತನಾಡಿ, ಯು.ಪಿ.ಎಸ್.ಸಿ. ಸಿಲಬಲ್ ತುಂಬಾ ಆಳವಾಗಿರುತ್ತದೆ. ಕೋಚಿಂಗ್‌ಗೆ ಹೈಟೆಕ್ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿದಲ್ಲಿ ಈ ಭಾಗದ ವಿದ್ಯಾರ್ಥಿಗಳಿಗೆ ಅವರ ಪಾಠವನ್ನು ಅರ್ಥೈಸಿಕೊಳ್ಳುವುದು ಕಷ್ಟವಾಗುತ್ತದೆ. ಆದುದರಿಂದ, ಇಲ್ಲಿನ ಮಕ್ಕಳಿಗೆ ಅರ್ಥವಾಗುವಂತೆ ಸರಳ ರೀತಿಯಲ್ಲಿ ಬೋಧಿಸಬಲ್ಲ ಪರಿಣಿತರನ್ನು ಆಹ್ವಾನಿಸಿದಲ್ಲಿ ಉಪಯೋಗವಾಗುತ್ತದೆ ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ವಿದ್ಯಾರ್ಥಿಗಳಿಗೆ ಮೋಟಿವೇಷನ್ ನೀಡಲು ಸಿದ್ಧರಿದ್ದಾರೆ. ಅವರ ಅನುಭವ ಬಳಸಿಕೊಂಡು ವಿದ್ಯಾರ್ಥಿಗಳಿಗೆ ಮಾಹಿತಿ/ ತರಬೇತಿ ನೀಡಬಹುದು. ವಿದ್ಯಾರ್ಥಿಗಳಿಗೆ ಒಂದು ನಾಮಿನಲ್ ಫೀ ನಿಗದಿ ಮಾಡಿದರೆ ಮಕ್ಕಳಿಗೆ ಒಂದು ಬದ್ಧತೆ ಇರುತ್ತದೆ. ತರಬೇತಿಯಲ್ಲಿ ಗಂಭೀರವಾಗಿ ಭಾಗವಹಿಸುತ್ತಾರೆ ಎಂದರು. ಕುಲಸಚಿವರು ಮಾತನಾಡಿ, ನಾಮಿನಲ್ ಆಗಿ ನೋಂದಣಿ ಶುಲ್ಕ ರೂ.500/–ಗಳನ್ನು ನಿಗದಿಪಡಿಸಬಹುದೆಂದು ಸೂಚಿಸಿದ್ದನ್ನು ಎಲ್ಲಾ ಸದಸ್ಯರು ಒಪ್ಪಿದರು.

ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರಕ್ಕೆ ಆಯವ್ಯಯದಲ್ಲಿ ಅನುದಾನ ಒದಗಿಸುವಂತೆ ಮಾನ್ಯ ಕುಲಪತಿಯವರು ಹಣಕಾಸು ಅಧಿಕಾರಿಗಳಿಗೆ ಸೂಚಿಸಿದರು.

**2026–ಸಿಂ–3.34(4ಡ):** ಶ್ರೀ ಅರವಿಂದ, ಹೆಚ್.ಜಿ. : ಹಾಸ್ಟೆಲ್ ಉದ್ಯೋಗಿಗಳನ್ನು ಖಾಯಂಗೊಳಿಸುವ ಕುರಿತು

ಶ್ರೀ ಅರವಿಂದ ಹೆಚ್.ಜಿ.ರವರು ಮಾತನಾಡಿ, ಹಾಸ್ಟೆಲ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ನೌಕರರು ತಮ್ಮನ್ನು ಖಾಯಂಗೊಳಿಸುವಂತೆ ಹೈಕೋರ್ಟ್‌ನಲ್ಲಿ ರಿಟ್ ಸಲ್ಲಿಸಿದ್ದು, ನ್ಯಾಯಾಲಯವು ಅವರ ಪರವಾಗಿ ತೀರ್ಪು ನೀಡಿದೆ. ಕಳೆದ ಸಿಂಡಿಕೇಟ್ ಸಭೆಯಲ್ಲಿ ಕೂಡ ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಳ್ಳಬೇಕೆಂದು ನಿರ್ಣಯವಾಗಿದೆ. ಆದರೆ, ಈವರೆಗೂ ಕ್ರಮವಾಗಿಲ್ಲ ಎಂದರು. ಶ್ರೀಮತಿ ಸಾಕಮ್ಮರವರು ಮಾತನಾಡಿ, ಹಾಸ್ಟೆಲ್ ನೌಕರರಿಗೆ ಪಿ.ಎಫ್. ಇತ್ಯಾದಿ ಸೌಲಭ್ಯ ನೀಡಬೇಕು ಎಂದರು.

ಕುಲಸಚಿವರು ಮಾತನಾಡಿ, ಈ ಬಗ್ಗೆ ನ್ಯಾಯಾಂಗ ನಿಂದನೆ ಅರ್ಜಿ ಕೂಡ ದಾಖಲಾಗಿದೆ. ಉಮಾದೇವಿ ಪ್ರಕರಣದ ರೀತಿಯಲ್ಲಿಯೇ ಪರಿಗಣಿಸುವಂತೆ ನ್ಯಾಯಾಲಯ ತಿಳಿಸಿದೆ. ಶೀಘ್ರದಲ್ಲಿಯೇ ಕ್ರಮ ಕೈಗೊಳ್ಳಲಾಗುವುದು. ಮುಂದುವರೆದು, ಹಾಸ್ಟೆಲ್ ನೌಕರರಿಗೆ ಹಾಸ್ಟೆಲ್ ಫಂಡ್‌ನಿಂದಲೇ ವೇತನ ಪಾವತಿಸುತ್ತಿದ್ದು, ಇತರೆ ಸೌಲಭ್ಯ ನೀಡುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

**2026–ಸಿಂ–3.34 (4ಇ):** ಡಾ.ಚಿದಾನಂದ ಎನ್.ಕೆ : ಡಿಜಿಟಲ್ ಮೌಲ್ಯಮಾಪನವನ್ನು ಕೇಂದ್ರೀಕೃತ ವ್ಯವಸ್ಥೆ ಮಾಡುವ ಬಗ್ಗೆ.

ಸದಸ್ಯರಾದ ಡಾ.ಚಿದಾನಂದ ಎನ್.ಕೆ.ರವರು ಮಾತನಾಡಿ, ಈ ಹಿಂದೆ ಮ್ಯಾನ್ಯುಯಲ್ ವ್ಯವಸ್ಥೆ ಇದ್ದಾಗ ಒಂದು ವಿಷಯದ ಎಲ್ಲಾ ಮೌಲ್ಯಮಾಪಕರು ಹಾಗೂ ರಿವ್ಯೂವರ್‌ಗಳು ಕುಳಿತು ಸಮಸ್ಯೆಗಳಿದ್ದಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳುತ್ತಿದ್ದೆವು ಇದರಿಂದ ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ದೊರೆಯುತ್ತಿತ್ತು. ಈಗ ಡಿಜಿಟಲ್ ಮೌಲ್ಯಮಾಪನವನ್ನು ವಿವಿಧ ಕೇಂದ್ರಗಳಲ್ಲಿ ನಡೆಯುವುದರಿಂದ ಈ ರೀತಿಯ ಚರ್ಚೆಗಳಿಗೆ ಹಾಗೂ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅವಕಾಶವಿಲ್ಲ ಎಂದರು. ಆದುದರಿಂದ ಡಿಜಿಟಲ್ ಮೌಲ್ಯಮಾಪನವನ್ನು ಕೂಡ ಕೇಂದ್ರೀಕೃತ ಮಾಡುವುದು ಒಳ್ಳೆಯದು ಎಂದರು. ಡಾ.ವೆಂಕಟೇಶ್‌ರವರು ಮಾತನಾಡಿ, ಈ ಹಿಂದೆ ಮೌಲ್ಯಮಾಪನ ಆರಂಭಿಸುವ ಮುನ್ನ Question Paper Pattern, Syllabus Scheme of Valuation ಮುಂತಾದವುಗಳ ಕುರಿತಾಗಿ ಅರ್ಧದಿನ ಸಭೆ ನಡೆಸಿ, ಹೊಸಬರಿಗೆ ತರಬೇತಿ ನೀಡಿ ಮೌಲ್ಯಮಾಪನ ನಡೆಸಲಾಗುತ್ತಿತ್ತು. ಯಾವುದೇ ಸಮಸ್ಯೆ ಬಂದರೂ ಚರ್ಚಿಸಿ ನಿರ್ಣಯಿಸಲಾಗುತ್ತಿತ್ತು. ಆದುದರಿಂದ ಕೇಂದ್ರೀಕೃತ ಮೌಲ್ಯಮಾಪನ ಉತ್ತಮ ವ್ಯವಸ್ಥೆ ಎಂದರು.

2020–ಸಂ–3.34(4ಎಫ್): ವಿಶ್ವವಿದ್ಯಾಲಯದ ಸಿಬ್ಬಂದಿಗಳು ಸಚಿವರುಗಳು, ಸರ್ಕಾರದ ಅಧಿಕಾರಿಗಳಿಗೆ ನೇರವಾಗಿ ಪತ್ರ ಬರೆಯುತ್ತಿರುವ ಕುರಿತು.

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಕೆಲವು ಸಿಬ್ಬಂದಿಗಳು ವಿಶ್ವವಿದ್ಯಾಲಯದ ವಿರುದ್ಧ, ಅಧಿಕಾರಿಗಳು ಮತ್ತು ನೌಕರರ ವಿರುದ್ಧ ವಿಶ್ವವಿದ್ಯಾಲಯದ ಅನುಮತಿ ಪಡೆಯದೇ ನೇರವಾಗಿ ಸಚಿವರುಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಹಾಗೂ ಉನ್ನತ ಅಧಿಕಾರಿಗಳಿಗೆ ನೇರವಾಗಿ ಪತ್ರ ಬರೆಯುತ್ತಿದ್ದಾರೆ ಹಾಗೂ ದೂರು ಸಲ್ಲಿಸುತ್ತಿದ್ದಾರೆ. ನಿಯಮಗಳ ಅಡಿಯಲ್ಲಿ ಇದಕ್ಕೆ ಅವಕಾಶವಿಲ್ಲ. ಅವರು ಸಮುಚಿತ ಮಾರ್ಗದಲ್ಲಿಯೇ ದೂರು ಸಲ್ಲಿಸಬೇಕು. ಇಲ್ಲವಾದಲ್ಲಿ ಅಂತಹ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದರು.

ಶ್ರೀ ಶಿವಕುಮಾರ್‌ರವರು ಮಾತನಾಡಿ, ನೌಕರರು 2–3 ಬಾರಿ ದೂರು ನೀಡಿದ್ದಾಗ್ಯೂ ಪರಿಗಣಿಸದಿದ್ದರೆ ಏನು ಮಾಡಬೇಕು ಎಂದರು. ಶ್ರೀಮತಿ ಸಾಕಮ್ಮರವರು ಮಾತನಾಡಿ, ನೌಕರರು ದೂರು ನೀಡುವ ಮುನ್ನ ವಿಶ್ವವಿದ್ಯಾಲಯದ ಅನುಮೋದನೆ ಪಡೆದುಕೊಳ್ಳಬೇಕು ಎಂದರು. ಶ್ರೀ ಕೆ.ಪಿ.ಶ್ರೀಪಾಲ್‌ರವರು ಮಾತನಾಡಿ, ನೌಕರರು ನೀಡುವ ದೂರಿನ ಬಗ್ಗೆ ಪರಿಶೀಲಿಸಲು ವಿಶ್ವವಿದ್ಯಾಲಯದಲ್ಲಿ ದೂರು ಪ್ರಾಧಿಕಾರ ರಚಿಸಬೇಕು. ದೂರನ್ನು ನೇರವಾಗಿ ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಸಲ್ಲಿಸದೇ ಸಮುಚಿತ ಮಾರ್ಗದಲ್ಲಿ ಮಾತ್ರ ಸಲ್ಲಿಸಬೇಕು. ನೇರವಾಗಿ ದೂರು ಸಲ್ಲಿಸಿದವರ ವಿರುದ್ಧ ವಿಶ್ವವಿದ್ಯಾಲಯವು ಶಿಸ್ತುಕ್ರಮ ಕೈಗೊಳ್ಳಬೇಕು ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ನೇರವಾಗಿ ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ದೂರು ನೀಡುವ ವಿಶ್ವವಿದ್ಯಾಲಯದ ನೌಕರರಿಗೆ ಮೊದಲ ಹಂತದಲ್ಲಿ ಎಚ್ಚರಿಗೆ ನೀಡಿ, ನಂತರ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವ (ಮೌಲ್ಯಮಾಪನ)ರವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಕುಲಪತಿಗಳು

ಕುಲಪತಿಗಳು
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ - 577 451.
ಶಿವಮೊಗ್ಗ ಜಿಲ್ಲೆ.